ಅಪರಂಜಿ

ಫೆಬ್ರವರಿ 99

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಎನ್. ಪ್ರಭಾಕರ್

ನಿಸಾರ್

ಡಾ|| ಪ್ರಕಾಶ್

ವಾಣಿ ಸುರೇಶ್

ಗುಂಡೂ ರಾ. ನಾ.

ಶಿವು

ಗಾಯತ್ರಿ

ಎಂ. ಎನ್. ಕೆ.

ನಕ್ಷತ್ರಿಕ

ಕೃಷ್ಣ ಸುಬ್ಬರಾವ್

ಕಂ. ಭಂ. ಕೃಷ್ಣಮೂರ್ತಿ

ಸುಧಾ ಸರನೋಬತ್

ಬಿಡಿ ಪ್ರತಿ: ರೂ. 5.00



ಕೊರವಂಜಿಗೆ ಲಕ್ಷ್ಮಣ್ ಬರೆದ ವ್ಯಂಗ ಚಿತ್ರ

ಶುಭಾಶಗಳೊಂದಿಗೆ

ವಿಜಯಾ ಮತ್ತು ಆನಂದ್ ದೇಸಾಯ್

ಆಸ್ಟಿನ್, ಟೆಕ್ಸಸ್



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಆಜೀವ ಚಂದಾ : ರೂ. 500

ವಿಳಾಸ : ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 16 ಫೆಬ್ರವರಿ 99 ಸಂಚಿಕೆ-5

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



ಅಪರಂಜಿ
(ತಿಳಿನಗೆಯ ಕಾರಂಜಿ)

ಸಂಪುಟ 16 ಫೆಬ್ರವರಿ 99 ಸಂಚಿಕೆ-5

ಆತನಿರವನು ತಿಳಿಯಲಳವಲ್ಲ

- ಅನುಭವಾಮೃತ

ಬ್ರಹ್ಮಜ್ಞಾನಿಯ ಹುಟ್ಟು ಸಾವುಗಳು ಧ್ವಂಸವಾಗಿರುತ್ತವೆ. ಅವನ ದೇಹವು ಪ್ರಾರಬ್ಧವಶದಿಂದ ತೋರುತ್ತದೆ. ಲೋಕಕ್ಕೆ ಅವನು ವ್ಯವಹರಿಸುವಂತೆ ತೋರುತ್ತದೆ. ಅವನು ಬ್ರಹ್ಮವಾಗಿಯೇ ಇರುತ್ತಾನೆ. ಅವನು ಹೇಗಿರುವನೆಂಬುದನ್ನು ತಿಳಿಯಲು ಸಾಧ್ಯವಿಲ್ಲ.

ಇವನೂ ಹಾಗೆಯೇ. ಮೆಜಾರಿಟಿಯಿದೆ. ಇರುವವರು ನೂರು ಜನರಿದ್ದಾರೆ ಎಂದಿಟ್ಟುಕೊಂಡರೆ ನೂರೆಂಟು ಭಿನ್ನಮತೀಯರಿದ್ದಾರೆ. ನೌಕರರು ಯಾರೂ ಕೆಲಸ ಮಾಡದಿರುವುದಕ್ಕೂ, ಮಾಡುತ್ತಿರುವುದಕ್ಕೂ ಜನರಿಗೆ ವ್ಯತ್ಯಾಸವೇ ತೋರುವುದಿಲ್ಲ. ಕ್ಲಿಂಟನ್ ಮಾಡಿದ ಬದುಕಿನ ನೂರುಪಟ್ಟು ಮಾಡುತ್ತಿದ್ದರೂ ಇಂಪೀಚ್‌ಮೆಂಟ್ ಸುದ್ದಿಯೇ ಇಲ್ಲ. ಜರ್ಝರಿತನಾಗಿದ್ದರೂ ಅಲ್ಲಾಡಿಸುವವರೇ ಇಲ್ಲ. ಅವನು ಹೇಗಿರುವನೋ ಅವನೇ ಬಲ್ಲ.

ಇವರೂ ಇದ್ದಾರೆ. ತಮ್ಮ ದೇಶದ ಚಿಂತೆ ಇವರಿಗಿಲ್ಲ. ಪರಕೀಯರೇ ಇವರ ನಾಯಕರು. ಎಲೆಕ್ಷನ್ ಗೆದ್ದೆವೆಂದು ತಮ್ಮದೇ ರಾಜ್ಯ ಎಂಬ ಸಂಭ್ರಮ ಇವರಿಗೆ, ಜುಟ್ಟು ಬೇರೆಯವರ ಕೈಲಿರುವುದೂ ತಮಗೊಂದು ಹಿರಿಮೆ ಎಂಬ ಭಾವನೆ. ಅವರು ಹೇಗಿರುವರೋ, ಹೇಗಾದರೂ ಇರುವರೋ ತಿಳಿಯಲು ಸಾಧ್ಯವಿಲ್ಲ.

ಇವರೂ ಇದ್ದಾರೆ. ಸರಸ್ವತಿ ಇವರಿಗೆ ವರ್ಜ್ಯ. ಸರಸ್ವತಿ ಬೇಡವೆನ್ನುವವರಿದ್ದಾರೆ ಎಂದು ಇವರಿಗೆ ಖುಷಿ, ಐವತ್ತು ವರ್ಷದ ಹೊಲಸು ಮೂರು ತಿಂಗಳಲ್ಲಿ ತೊಳೆಯಲು ಅವರಿಗೆ ಸಾಧ್ಯವಾಗುತ್ತಿಲ್ಲ. ಮತ್ತೆ ಹೊಲಸಿಗರೇ ಬರಲಿ. ಎಂದು ಬರೆಯುತ್ತಾರೆ. ತಲೆ ಹೇಗಿದೆಯೋ ತಿಳಿಯಲು ಆಗದು.

ಇವರ ನಡುವೆಯೇ ನಾನಿದ್ದೇನೆ. ಹೇಗಿರುವೆನೋ ನನಗೇ ತಿಳಿಯದು ಎಂದು ಅಪರಂಜಿ ಬೆದರುನಗೆ ನಗುತ್ತಿದ್ದಾಳೆ.



○ ಪ್ರಕಾಶ್

ಬೆಂಗಳೂರು ನಗರ ನನ್ನ ಮನ ಗೆದ್ದಿದೆ

- ಶ್ರೀ ವಾಜಪೇಯೀ

ದೆಹಲಿಯ ಚಳಿ - ನಡುಕ ಇಲ್ಲಿಲ್ಲವಲ್ಲ!!

★★★

ಗ್ರಾಮೀಣರಿಗೆ ವೈದ್ಯಕೀಯ ಸೌಲಭ್ಯಕ್ಕೆ ಕರೆ

- ದಂತ ಸಮ್ಮೇಳನದಲ್ಲಿ ಗೌರ್ನರ್

ದಂತ ಕಥೆ!!

★★★

ಸರ್ಕಾರದ ಇಲಾಖೆಗಳಿಗೆ ಗೂರಲು ರೋಗ ಬಂದಿದೆ

- ಶ್ರೀ ವಾಟಾಳ್

ದಕ್ಷತೆ ಎಂಬ ಇನ್‌ಹೇಲರ್ ಬಳಸುತ್ತಾರಂತೆ!!

★★★

ಕ್ಯಾಥೇ ಪೆಸಿಫಿಕ್ ಏರ್‌ಲೈನ್ಸ್ ಸಿಬ್ಬಂದಿ 'ನಗದೆ ಇರುವ' ಮುಷ್ಕರ ನಡೆಸುತ್ತಾರೆ

- ಸುದ್ದಿ

ಈಗ ಗಂಭೀರವಾಗಿ ಪ್ರಯಾಣ ಮಾಡಬಹುದು!!

★★★

ಅಪಪ್ರಚಾರಕ್ಕೆ ಕಿವಿಗೊಡಬೇಡಿ
- ಶ್ರೀ ಕುಶಭಾವು

ಇದೇ 'ಅಪಪ್ರಚಾರ' ಅಂತ ಹೇಗೆ ಕಂಡುಹಿಡಿಯಯೋದು ಸ್ವಾಮಿ?

★★★

ದೆಹಲಿಯಲ್ಲಿ ಪಿಚ್ ಅಗೆದು ಶಿವಸೇನೆ ಪ್ರತಿಭಟನೆ
- ಸುದ್ದಿ

ಛೆ, ಕುಂಬ್ಳೆಗೆ ಸಹಾಯ ಮಾಡುತ್ತಿದ್ದರು ಅಷ್ಟೆ!!

★★★

ಪೋಲೀಸರಂತೆ ನಟಿಸಿ ಹಣ ದರೋಡೆ
- ಸುದ್ದಿ

ನಟಿಸಲು ಅಗತ್ಯವಿದ್ದುದು ಆಶ್ಚರ್ಯ!!

★★★

ಮತಾಂತರ; ರಾಷ್ಟ್ರೀಯ ಚರ್ಚೆಗೆ ಪ್ರಧಾನಿ ಸಲಹೆ
- ಪತ್ರಿಕೆ

ವೋಟಿಂಗ್ ಬಗ್ಗೆ ಮಾತನಾಡುತ್ತಿದ್ದರೋ ಏನೋ??

★★★

ಗಾಲ್ಫ್‌ನಲ್ಲಿ ಶ್ರೀಲಂಕಾಕ್ಕೆ ಸೋಲು
- ಕ್ರೀಡಾ ಸುದ್ದಿ

ಜೋರಾಗಿ ಹೊಡೆದರೆ ಸಮುದ್ರಕ್ಕೆ ಬಾಲ್ ಬೀಳುತ್ತೆ ಅಂತ ಭಯ ಪಾಪ!!

★★★

ನಮ್ಮ ನಿಮ್ಮಲ್ಲಿ

ಅಪರಂಜಿಗೆ ಈಗ "ಈಮೇಯ್ಲ್" ಸೌಲಭ್ಯ ಇದೆ. aparanji@hotmail.com ಗೆ ಇನ್ನು ಮೇಲೆ ನಿಮ್ಮ ಅನಿಸಿಕೆಗಳನ್ನು ಕ್ಷಣಾರ್ಧದಲ್ಲಿ ಕಳುಹಿಸಬಹುದು. ಕನ್ನಡದಲ್ಲೇ ವ್ಯವಹಾರ ಮಾಡಲು ಇಷ್ಟವಿರುವವರು ತಮ್ಮ ಕನ್ನಡ ಗದ್ಯವನ್ನು jpeg ಗ್ರಾಫಿಕ್ ಫೈಲ್ ಆಗಿ ಪರಿವರ್ತಿಸಿ ಈಮೇಯ್ಲ್‌ಗೆ attachment ಆಗಿ ಕಳುಹಿಸಬಹುದು. ಇದೆಲ್ಲಾ ಫಜೀತಿನೇ ಬೇಡ ಅನ್ನುವವರು ಎಂದಿನಂತೆ snail mail ಬಳಸಬಹುದು. ಈ ಸಂಪರ್ಕದ ವಿಷಯ ಯಾಕೆ ಈಗ ಅಂತ ಕೇಳಿದ್ರಾ? ಕಾರಣ ಇದೆ. ಈ ಬಾರಿಯ ಹಾಸ್ಯೋತ್ಸವ ತಕ್ಕಮಟ್ಟಿಗೆ ಯಶಸ್ಸನ್ನು ಕಂಡಿದ್ದರಿಂದ, ಮುಂದಿನ ಹಾಸ್ಯೋತ್ಸವದ ಥೀಮ್, ಕಾರ್ಯಕ್ರಮ ವಿವರ, ವ್ಯವಸ್ಥೆಯ ಪರಿಷ್ಕರಣ ಇವುಗಳ ಆಯ್ಕೆಯನ್ನು ನಿಮ್ಮ ಅನಿಸಿಕೆಗಳನ್ನಾಧರಿಸಿ ನಿರ್ಧರಿಸುವ ಯೋಚನೆ ನಮ್ಮದು. ದಿಢೀರ್ ಸಂಪರ್ಕವಿದ್ದರೆ ಈ ಕೆಲಸ ಬಹು ಸುಲಭ ಅಲ್ಲವೇ.

"ಹಾಸ್ಯೋತ್ಸವ-99"ಕ್ಕೆ, ನಮ್ಮ ರಾಜಗೋಪಾಲ್ ಹೇಳುವ ಹಾಗೆ "ಇನ್ನೂ ಬೇಜಾನ್ ಠೇಂ" ಇರುವುದರಿಂದ ಈಗಲೇ ಅದರ ಬಗೆಗಿನ ಚಿಂತನೆ ಏನೂ ಅವಸರವಿಲ್ಲವೆಂದು ನಮ್ಮ ಕಾರ್ಯಕರ್ತರೆಲ್ಲಾ ಒಮ್ಮತದಿಂದ ನಿರ್ಧರಿಸಿ, ರಾಶಿ-ರತ್ನ ಸ್ಮರಣೆಯ ಯಶಸ್ಸನ್ನು ಮೆಲುಕುಹಾಕಲು ನಮ್ಮ ಕ್ಲಬ್ಬಿನಲ್ಲಿ ಸೇರಿದ್ದರು. ನಮ್ಮ ಜೊತೆಗೆ ಗಾನವಿನೋದಿನಿಯ, ಸುಬ್ಬರಾಮ್, ಕಿರ್ಲೋಸ್ಕರ್ ಸತ್ಯ, ಹಾಗೂ ಅಶ್ವಥ್ ಸೇರಿದ್ದು ಅಂದಿನ ಸಂಜೆಯ ಕಲಾಪಗಳಿಗೆ ಒಂದು ವಿಶೇಷ ಮೆರಗು ನೀಡಿತ್ತು.

ಹಾಸ್ಯೋತ್ಸವದಲ್ಲಿ ಸತ್ಯ ಹೇಳಿದ "ಭಾಗ್ಯದ ಲಕ್ಷ್ಮೀ ಬಾರಮ್ಮ" ವರ್ಷನ್ ಕೇಳಿದಾಗಿನಿಂದ ಅನೇಕರಿಗೆ ಒಂದು ಅನಿರೀಕ್ಷಿತ ತೊಂದರೆ ಉಂಟಾಗಿದೆ. ಪೂಜಾ ಸಮಯದಲ್ಲಿ ಈ ದೇವರ ನಾಮವನ್ನು ಹೇಳುವಾಗ ಸತ್ಯ ಹೇಳಿದ "ವಿಠಲನ ಬೇಗಂ" ನೆನಪಿಗೆ ಬಂದು ನಗು ತಡೆಯಲಾಗದೇ ಇಡೀ ಪೂಜೆಯೇ ಹಾಳಾಗಿ ಹೋಗ್ತಾ ಇದೆ ಅಂತ ಅನೇಕರು ದೂರಿದರು. ಆ ಸಂಜೆ ಸತ್ಯ ಒಳ್ಳೇ ಫಾರಂನಲ್ಲಿದ್ದರು ಅಂತ ಕಾಣುತ್ತೆ, ಒಂದಾದ ಮೇಲೊಂದು ನಗೆ ಚಟಾಕಿ ಹಾರುತ್ತಲೇ ಇತ್ತು. ಅತೀ ಎತ್ತರ ಇರೋ ಲಂಬೂ ಒಬ್ಬ ಮಾರ್ಕೆಟ್‌ಗೆ ಹೋಗ್ತಾನಂತೆ. ಅಲ್ಲಿ ತರಕಾರಿ ಮಾರೋನ ಹತ್ರ ನಿಂತ್ಕೊಂಡು "ಏನಯ್ಯಾ ರಾಜಾ, ಡಜನ್‌ಗೆ ಎಷ್ಟು ಈ ನಿಂಬೇ ಹಣ್ಣಗೆ?" ಅಂತ ಲಂಬೂ ಕೇಳ್ತಾನಂತೆ. ಅದಕ್ಕೆ ಆ ತರ್ಕಾರಿ ಮಾರೋನು ಏನು ಹೇಳ್ತಾನಂತೆ ಗೊತ್ತೇ. "ವಸಿ ಕುಂತ್ಕೊಂಡು ಯಾಪಾರ ಮಾಡಿ ಬುದ್ಧೀ, ಅದು ನಿಂಬೇ ಅಣ್ಣಲ್ಲ, ಮುಸಂಬೀ"

ಅಪರಂಜಿ ಕಿಡಿಗಾರ (ಕಿಡಿಗೇಡಿ ಅಲ್ಲ) ಪ್ರಕಾಶ್, ಹಾಸ್ಯೋತ್ಸವದಿಂದ ನಾಲ್ಕು ಘಂಟೆಗೆ ಯಾವುದೋ ಕಾರ್ಯನಿಮಿತ್ತ ಹೊರಟುಹೋಗಿದ್ದರಿಂದ ಗಾನವಿನೋದಿನಿಯ ತಮಾಷೆಗಳೆಲ್ಲವನ್ನೂ ಮಿಸ್ ಮಾಡಿಕೊಂಡಿದ್ದ. ಹಾಗಾಗಿ ಸತ್ಯ ಇನ್ನೊಮ್ಮೆ ತಮ್ಮ ಭಾಗ್ಯದ ಲಕ್ಷ್ಮೀ... ಹೇಳಬೇಕಾಯಿತು. ಅನಂತರ ಪ್ರಕಾಶ್ "ಇಂಗ್ಲೀಷಿನಲ್ಲಿ ಬಳಕೆಯಲ್ಲಿರುವ "you are telling me!" ಎಂಬ ಹೇಳಿಕೆ ಮೊಟ್ಟಮೊದಲ ಬಾರಿ ಯಾರು ಬಳಸಿದ್ದು ಗೊತ್ತೇ?" ಅಂತ ಕೇಳಿದ. ಎಲ್ಲರೂ ಯಥಾಪ್ರಕಾರ "ಗೊತ್ತಿಲ್ಲ" ಅಂದೆವು. "ಮೆಡೀವಲ್ ಕಾಲದಲ್ಲಿ ನಡೆದ ಸಂಗತಿ ಇದು. ಇಂಗ್ಲೆಂಡಿನಲ್ಲಿ ಪಾಳೆಯಗಾರರಿದ್ದ ಕಾಲ. ಒಬ್ಬ ಶೂರ ಪಾಳೆಯಗಾರನಿಗೆ ಅತ್ಯಂತ ರೂಪಸಿಯಾದ ರಾಣಿ ಇದ್ದಳಂತೆ. ಒಮ್ಮೆ ನಮ್ ರಾಜ ಯುದ್ಧಕ್ಕೆ ಹೋಗಬೇಕಾಗಿ ಬಂತು. ಅಶ್ವದಳ, ಪದಾತಿ ಸೈನ್ಯ ಎಲ್ಲಾ ಸಜ್ಜಾದರು. ಕಾಳಗಕ್ಕೆ ಹೊರಡುವ ಮುಂಚೆ ರಾಜ ತನ್ನ ತರುಣ ಮಂತ್ರಿಯನ್ನು ಕರೆದು "ಮಂತ್ರಿವರ್ಯಾ, ರಣರಂಗಕ್ಕೆ ತೆರಳುತ್ತಿದ್ದೇನೆ. ಅರಮನೆಯ ಎಲ್ಲ ಜವಾಬ್ದಾರಿ ನಿನ್ನ ತಾರುಣ್ಯ ಭುಜಗಳ ಮೇಲೆ (Young Shoulders ಅನ್ನಕ್ಕೆ ಇದೇ ತಕ್ಕ ಪದ ಅಲ್ವೇ) ಹೊರಿಸಿ ಹೋಗ್ತಾ ಇದೀನಿ. ನನ್ನ ಪ್ರೀತಿಯ ರಾಣಿನ ಕಾಪಾಡೋ ಭಾರ ನಿನ್ನದು. ಅನೇಕರಿಗೆ ಅವಳ ಮೇಲೆ ಕಣ್ಣಿದೆ. ಅದಕ್ಕೆ ಈ ಛಾಸ್ಟಿಟಿ ಬೆಲ್ಟಿನ ಬೀಗದಕೈನ

ನಿನ್ನ ಕೈಗೆ ಕೊಡುತ್ತಿದ್ದೇನೆ ಜೋಪಾನ. ಅದನ್ನು ಯಾರ ಕೈಗೂ ಸಿಕ್ಕದಂತೆ ರಕ್ಷಿಸೋ ಜವಾಬ್ದಾರಿ ನಿಂದು, ಬೈ'' ಅಂತ ಹೇಳಿ ರಾಜ ಕುದುರೆ ಏರಿ ಹೊರಟ. ರಣಗೀತೆಗಳನ್ನು ಹಾಡುತ್ತಾ, ರಣವಾದ್ಯಗಳನ್ನು ನುಡಿಸುತ್ತಾ ರಾಜನ ಸೈನ್ಯ ಅವನ ಹಿಂದೆ ಹೊರಟಿತು.

ಒಂದೆರಡು ತಾಸು ಕಳೆದಿರಬಹುದು. ದೂರದಲ್ಲಿ ಊರಿನ ಕಡೆಯಿಂದ ಕುದುರೆಯೊಂದು ದೌಡಾಯಿಸುತ್ತಾ ಸೈನ್ಯದ ಕಡೆಗೇ ಬರುತ್ತಿತ್ತು. ಊರಿನಲ್ಲಿ ಏನು ಅನಾಹುತವಾಗಿರಬಹುದೋ ಅಂತ ಚಿಂತಿಸುತ್ತಾ ರಾಜ ಆತಂಕದಿಂದ ಆ ದಿಕ್ಕನೇ ನೋಡುತ್ತಿದ್ದ. ಕುದುರೆ ಹತ್ತಿರ ಬಂದಾಗ ಅಶ್ವಾರೂಢನಾಗಿದ್ದವ ರಾಜನ ಮಂತ್ರಿ ಅಂತ ತಿಳಿಯಿತು. ಮಂತ್ರಿ ಕುದುರೆಯಿಂದ ಇಳಿದು ರಾಜನನ್ನು ಸಮೀಪಿಸುತ್ತಿದ್ದಂತೆ, ರಾಜ ''ಮಂತ್ರಿವರ್ಯಾ ಏನಿದು ಈ ನಾಗಾಲೋಟದ ಆಗಮನ? ಊರಿನಲ್ಲಿ ಎಲ್ಲರೂ ಕುಶಲವಷ್ಟೇ. ನಮ್ಮ ಶತ್ರುಗಳೇನಾದರೂ ಬೇರೆ ದಿಕ್ಕಿನಿಂದ ಧಾಳಿ....'' ಎಂದೆಲ್ಲಾ ರಾಜ ಕೇಳುತ್ತಿದ್ದಾಗ ಮಂತ್ರಿ ಮಧ್ಯೆ ಬಾಯಿಹಾಕಿ ''ಹಾಗೇನೂ ಆಗಿಲ್ಲ ಮಹಾಸ್ವಾಮಿ. ಆದರೆ ಒಂದು ಪ್ರಮಾದವಾಗಿದೆ. ಅದಕ್ಕೇ ಇಲ್ಲಿಗೆ ದೌಡಾಯಿಸಿ ಬಂದೆ'' ಅಂದನಂತೆ. ''ಏನದು ಅಂತಹ ಪ್ರಮಾದ?'' ರಾಜ ಪ್ರಶ್ನೆ ಹಾಕಿದ.

''ನೀವು ನನ್ನ ಸುಪರ್ದಿಗೆ ಕೊಟ್ಟ ಬೀಗದ ಕೈ ಬದಲಾಗಿರುವಂತೆ ಕಾಣುತ್ತೆ. ಅದಕ್ಕೇ ಓಡಿ ಬಂದೆ'' ಅಂತ ಮಂತ್ರಿವರ್ಯ ಹೇಳಿದಾಗ, ರಾಜ ಕೊಟ್ಟ ಉತ್ತರ "You are telling me!"

ಇದೆಲ್ಲಾ ಮಾತುಕತೆ ನಡೆಯುತ್ತಿದ್ದಾಗ ವೈಯೆನ್ಕೆ ನಮ್ಮ ಟೇಬಲ್ಲಿಗೆ ಬಂದರು. ಕನ್ನಡ ಪ್ರಭದಲ್ಲಿ ನಮ್ಮ ಹಾಸ್ಯೋತ್ಸವಕ್ಕೆ ಅವರು ನೀಡಿದ ಕವರೇಜ್‌ಗೆ ಅವರನ್ನು ಥ್ಯಾಂಕ್ ಮಾಡ ಹೊರಟಾಗ, ಅವರು ''ನಿಮ್ಮ Thanks ಹಾಗಿರ್ಲಿ. ಇನ್ಮೇಲೆ ನಿಮ್ಮ ಹಾಸ್ಯೋತ್ಸವಗಳಲ್ಲಿ ಗ್ರಾಮೀಣ ಹಾಸ್ಯ ತರೋ ಯತ್ನ ಮಾಡಿ. you are missing out on a lot of original humor." ಅಂತ ಹಿತವಚನ ನೀಡಿದರು. ಒಟ್ಟನಲ್ಲಿ ಆ ಸಂಜೆ ನಮ್ಮ ವುಡ್ ಹೌಸ್ ಹೇಳುವಹಾಗೆ A Good time was had by all.

ಇನ್ನು ಹಾಸ್ಯೋತ್ಸವ-ವಿಶೇಷಾಂಕಕ್ಕೆ ಪ್ರತಿಕ್ರಿಯಿಸಿ ಅನೇಕರು ಪತ್ರಗಳನ್ನ ಬರೆದಿದ್ದಾರೆ. ಅವುಗಳನ್ನ ಪ್ರತಿನಿಧಿಸುವಂತೆ ಶ್ರೀಮತಿ ವಾಣಿ ಸುರೇಶ್ ರವರ ಲೇಖನವನ್ನ ಈ ಸಂಚಿಕೆಯಲ್ಲಿ ಕೊಟ್ಟಿದ್ದೇನೆ. ಇದು ಅಪರಂಜಿಗೆ ಈ ಲೇಖಕಿಯ ಪ್ರಥಮ ಬರಹ. ಇವರ ಲೇಖನಿಯಿಂದ ಉತ್ತಮ ನಗೆ ಲೇಖನಗಳು ಹೊರ ಬರಲಿ ಎಂದು ಹಾರೈಸುವೆ. ಇನ್ನೊಂದು ಮುಖ್ಯ ವಿಷಯ. ಅಪರಂಜಿಗೆ ಮುಂದಿನ ಅಕ್ಟೋಬರ್ ಹೊತ್ತಿಗೆ ಕನಿಷ್ಠ ಪಕ್ಷ ಇನ್ನೂರು ಹೊಸ ಚಂದಾದಾರರು ಬೇಕು. ನಿಮಗೆ ಈ ಸಂಚಿಕೆಯಲ್ಲಿನ ಬರಹಗಳು ಮೆಚ್ಚಿಗೆಯಾದರೆ ನಮಗೆ ಒಬ್ಬ ಹೊಸ ಚಂದಾದಾರರನ್ನು ಪರಿಚಯಿಸಿ. ಇದರಿಂದ ಅಪರಂಜಿ ತನ್ನ ಕಾಲ ಮೇಲೆ ತಾನು ನಿಲ್ಲಲು ಸಹಾಯವಾದೀತು. ಈ ಸಂಚಿಕೆಯ ಕೊನೆಯ ಪುಟದಲ್ಲಿ ಈ ಕುರಿತು ಮಾಹಿತಿ ಇದೆ. ಪತ್ರ ಮುಗಿಸುವ ಮುನ್ನ ನಿಮಗೆ ನಮ್ಮ ಕಾರ್ಪೆಂಟರ್ ಕೆಂಪಯ್ಯನ ವಿಷಯ ಹೇಳಲೇ ಬೇಕು. ಕೆಂಪಯ್ಯನಿಗೆ ಕಳೆದ ತಿಂಗಳು ಗಂಡು ಮಗು ಆಯಿತು. ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಮೊನ್ನೆ ಕೆಂಪಯ್ಯ ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನೇ ನೋಡುತ್ತಾ ನಿಂತಿದ್ದ. ಗಂಡನ ಮುಖದಲ್ಲಿ ಕಾಣುತ್ತಿದ್ದ ಆಶ್ಚರ್ಯ ಮೆಚ್ಚುಗೆ ಇವನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿದ್ದ ಲಕ್ಷ್ಮಿ, ಗಂಡನ ಬಳಿ ಸರಿದು ನಿಂತು ''ಯಾನದು. ಬೋ ಯೋಚ್ನೆ ಮಾಡ್ಕಂಡಿದ್ವಿ. ನಂಗೂ ವಸಿ ಏಳ್ರೀ'' ಅಂತ ವೈಯ್ಯಾರದಿಂದ ಕೇಳಿದಾಗ, ಕೆಂಪಯ್ಯ ಕೊಟ್ಟ ಉತ್ತರ ''ಅಲ್ಕಣೇ ನೂರೈವತ್ ರೂಪಾಯ್‌ಗೆ ಇಷ್ಟು ಐಕ್ಲಾಸ್ ತೊಟ್ಲಿಲು ಮಾಡವ್ನಲ್ಲಾ, ಅವನ್ ಥಲೇನೆ ಥಲೆ!''

ಜಾತಕ ಪಕ್ಷಿತರಹ ಈಮೇಯ್ಲ್‌ನಲ್ಲಿ ನಿಮ್ಮ ಪತ್ರಕ್ಕಾಗಿ ಕಾಯ್ತಾ ಇರ್ತೇನೆ. ಬರೆಯೋದನ್ನ ಮರೀಬೇಡಿ.

- ಶಿವಕುಮಾರ್

ಹುಲಿ ಹೋಯ್ತು...

– ಎನ್. ಪ್ರಭಾಕರ್

ಭಾನುವಾರದ ಬಗ್ಗೆ ನನಗೆ ಇನ್ನಿಲ್ಲದ ಬೇಸರ, ಯಾಕೆಂದರೆ ಅದು ವಾರದ ಕೊನೆಯಲ್ಲಿ ಬರುವುದು ಒಂದು ಕಾರಣವಾದರೆ, ಇನ್ನೊಂದು, ವಾರಕ್ಕೆರಡು ಬಾರಿಯಾದರೂ ಬರಬಾರದೇ ಕಡೇಪಕ್ಷ ಎಂಬುದರಿಂದಾಗಿ, ಅಂಥ ಒಂದು ಭಾನುವಾರದ ಬೆಳಗ್ಗೆ.

ಇಂಡಿಯ ಟಾಸ್ ಗೆದ್ದು ಬ್ಯಾಟಿಂಗ್ ಪ್ರಾರಂಭಿಸುವುದಕ್ಕೂ ಹೊರಗಡೆ ಹಾಲಿನಲ್ಲಿ ನನ್ನವಳು ತನ್ನ ಗೆಳತಿಯರೊಂದಿಗೆ ಹರಟೆ ಹೊಡೆಯಲು ಪ್ರಾರಂಭಿಸಿದ್ದಕ್ಕೂ ಕಾಕತಾಳೀಯವಾಯ್ತು. ಭಾನುವಾರವಾದರೂ ಆಫೀಸಿನಲ್ಲಿ ತುರ್ತು ಕೆಲಸವಿದ್ದುದರಿಂದ ಬಾಸ್‌ಗೆ ಸಬೂಬು ಹೇಳಿ ಚಕ್ಕರ್ ಹೊಡೆದು ದೂರದರ್ಶನದ ಆರಾಧಕನಾಗಿದ್ದೆ. ಬಾಸ್‌ಗಳ ಹಣೇ ಬರಹವೇ ಇಷ್ಟು! ಕೈಕೆಳಗಿನವರಿಗೆ ಯಾವುದು ಪ್ರಿಯವೋ ಅದು ಅವರಿಗೆ ತ್ಯಾಜ್ಯ. ಕೈಯ್ಯಲ್ಲಿ ಪೇಪರ್ ಹಿಡಿದು ಕಣ್ಣು, ಮನಸ್ಸನ್ನು - ಯುವ ಜನತೆಯ ಭೌದ್ಧಿಕ ದಿವಾಳಿಗೆ ಪಣತೊಟ್ಟು ನಿಂತಿರುವ - ಟಿ.ವಿ.ಗೆ ಅರ್ಪಿಸಿದೆ.

ಐದು ಓವರುಗಳು ಮುಗಿದಿರಬಹುದು. ನನ್ನವಳು ''ರೀ'' ಎಂದು ಗಾಬರಿಯಿಂದ ಕೂಗಿಕೊಂಡಳು. ಬಾಂಬ್ ಸ್ಫೋಟಿಸಿತೆ ಇಲ್ಲ ಸಿಲಿಂಡರ್ ಸಿಡಿಯಿತೆ? ಹೆಂಗೆಳೆಯರ ಹರಟೆಯ ಧ್ವನಿಮಟ್ಟ ನನ್ನವರೆಗೂ ಕೇಳಿಸುವ ಶಕ್ತಿ ಸ್ಫೋಟಕಕ್ಕೆ ಇರಲಾರದು. ''ಏನೆ?'' ಅಂದೆ ಸ್ಥಿತಪ್ರಜ್ಞೆಯಿಂದ. ಇಪ್ಪತ್ತೈದು ವರ್ಷಗಳ ಸಹ ಒಡನಾಟದಿಂದ ನನಗೆ ಪ್ರಾಪ್ತವಾಗಿರುವ ಈ ಸ್ಥಿತಪ್ರಜ್ಞೆಯು ಯಾವ ಪರಿವ್ರಾಜಕ ಪರಮಹಂಸರಿಗೂ ಬರಲಾರದು. ''ಕೊನೆಮನೆ ನಾಗರಾಜರಾಯರನ್ನು ಪೋಲೀಸ್‌ನವರು ಅರೆಸ್ಟ್‌ಮಾಡಿಕೊಂಡು ಜೀಪಿನಲ್ಲಿ ಕರೆದುಕೊಂಡು ಹೋದರಂತೆ'' ಎಂದಳು. ''ಓ ಗಾಡ್'' ಅಂದೆ. ಓಪನಿಂಗ್ ಬ್ಯಾಟ್ಸ್‌ಮನ್ ಒಂದು ರನ್ನೂ ಹೊಡೆಯದೆ ಔಟಾಗಿದ್ದ.. ನಾಗರಾಜರಾಯರು ನಾಕಂಡಂತೆ ಸುಸಂಸ್ಕೃತ ವ್ಯಕ್ತಿ. ಅವರೇನು ಅಂಥ ಅಪರಾಧ ಮಾಡಿದ್ದು? ಓಪನಿಂಗ್ ಬ್ಯಾಟ್ಸ್‌ಮನ್ ಔಟಾಗಿದ್ದು ಮತ್ತು ನಾಗರಾಜರಾಯರ ವಿಚಾರ ಎರಡಕ್ಕೂ ಸೇರಿಸಿ 'ಓ ಗಾಡ್' ಅಂದಿದ್ದು. ''ಯಾರು ಹೇಳಿದ್ರೆ?'' ಎಂದೆ. ಪಕ್ಕದಮನೆ ಮೀನಾಕ್ಷಮ್ಮ ಹೇಳಿದ್ದು, ರೀ'' ಎಂದು ಗಾಬರಿಯಿಂದ ನುಡಿದಾಗ, ''ಅವರು ಸ್ವಲ್ಪ ಬುರುಡೆ ಹೊಡೆಯುವುದು ಜಾಸ್ತಿ ಅಲ್ವೇನೆ?'' ಎಂದೆ. ಎರಡನೆಯ ಬ್ಯಾಟ್ಸ್‌ಮನ್ ಮೂರು ಸೆಂಚುರಿ ಹೊಡೆಯುವ ಸ್ಟೈಲ್‌ನಲ್ಲಿ

ಫೀಲ್ಡ್‌ಗೆ ಇಳಿಯುತ್ತಿದ್ದ. ಮತ್ತೆ ಐದಾರು ಓವರುಗಳಾದವು. ನನ್ನವಳು ಇನ್ನೊಮ್ಮೆ ರೂಮಿಗೆ ಬಂದು, ''ನಾಗರಾಜರಾಯರನ್ನು ಅರೆಸ್ಟ್‌ಮಾಡಿ ಕರೆದುಕೊಂಡು ಹೋಗಲಿಲ್ಲ. ವಾರೆಂಟ್‌ಕೊಟ್ಟು ಹೋಗಿದ್ದಾರಂತೆ'' ಎಂದು ಇಂಟೀರಿಯಮ್ ರಿಪೋರ್ಟ್ ಕೊಟ್ಟಳು. ಹಾಗೆಂದು ಮೂರನೆಮನೆ ಗೃಹಿಣಿ ನಾಗವೇಣಮ್ಮ ಹೇಳಿದಳಂತೆ. ನಾಗವೇಣಮ್ಮನವರ ಮನೆಯಲ್ಲಿ ನಾಲ್ಕಾರು ಬಾರಿ ಕಾಫಿ ಕುಡಿದಿದ್ದೇನೆ. ಆದರೆ ಕಾಫಿಪುಡಿಗೆ ಚಿಕೋರಿ ಜಾಸ್ತಿ ಬೆರೆಸುತ್ತಾರೆ. ಬದುಕಿನಲ್ಲೂ ಅಷ್ಟೆ; ನೋಡಿದ್ದು ಇಷ್ಟಾದರೆ ಚಿಕೋರಿ ಅಷ್ಟೊಂದು! ಬಂದ ಎರಡನೆಯ ಬ್ಯಾಟ್ಸ್‌ಮನ್ ರನ್ ಹೊಡೆಯಲು ಸನ್ಯಾಸ ತೆಗೆದುಕೊಂಡವನಂತೆ ತೂರಾಡುತ್ತಿದ್ದ. ನನ್ನವಳು ಮಗದೊಮ್ಮೆ ಬಂದು ಹೊಸ, ಸಂಸ್ಕರಿಸಿದ ಸುದ್ದಿಯೊಂದನ್ನು ಬಿತ್ತರಿಸಿದಳು. ಅದು ಆಚೆಮನೆ ಲತಾಕುಲಕರ್ಣಿ ಗೌಪ್ಯವಾಗಿ ಕೊಟ್ಟಿದ್ದ ಬಾನುಲಿ ವರದಿ. ಅದೇಂದರೆ: ''ನಾಗರಾಜರಾಯರ ಮೇಲೆ ಯಾವುದೋ ತೀವ್ರ ಮೊಕದ್ದಮೆ ದಾಖಲಾಗಿದೆಯಂತೆ. ''ಪೋಲೀಸ್ ತೀವ್ರ ಶೋಧನೆಯಲ್ಲಿದೆ. ಡಾಗ್ ಸ್ಕ್ವಾಡ್‌ಕೂಡ ಬರುವ ನಿರೀಕ್ಷೆಯಿದೆ.'' ಇನ್ನಿಬ್ಬರು ಬ್ಯಾಟ್ಸ್‌ಮನ್‌ಗಳು ನಿರಾಯಾಸವಾಗಿ ಪೆವಿಲಿಯನ್ ಸೇರಿ ಮೊದಲನೆಯ ಬ್ಯಾಟ್ಸ್‌ಮನ್ ಹಾಕಿದ್ದ ಸಂಪ್ರದಾಯವನ್ನು ಸಮರ್ಥಿಸಿಕೊಂಡಿದ್ದರು. ರನ್‌ಗಿಂತ ಕ್ರೀಡಾಮನೋಭಾವ ಮುಖ್ಯವಲ್ಲವೆ? ವಿಷಯ ಗಂಭೀರವಾದದ್ದು. ಅದು, ಇದು ಎರಡು ಕೂಡ. ಭಾರತೀಯರು ಭಾವುಕರು ಹಾಗೂ ಸಂಪ್ರದಾಯವಾದಿಗಳು. ಅಳಿದುಳಿದ ಬ್ಯಾಟ್ಸ್‌ಮನ್‌ಗಳು ನಾಮುಂದು ತಾಮುಂದೆಂದು ಪೆವಿಲಿಯನ್‌ಗೆ ತೆರಳುವ ದೃಶ್ಯವನ್ನು ನೋಡುವ ಬದಲು ಆಫೀಸಿಗೆ ಹೋಗಿದ್ದಿದ್ದರೆ ಬಾಸ್‌ನ ಮೆಚ್ಚಿಗೆಯನ್ನಾದರೂ ಪಡೆಯಬಹುದಾಗಿತ್ತು. ಮೊದಲು ಕೆಡಬೇಕು, ಆಮೇಲೆ ತಾನೆ ಬುದ್ಧಿ ಬರುವುದು! ಬುದ್ಧಿ ಬಂದಮೇಲೂ ಕೆಡುವ ಸಂಭವವಿದೆ. ಅದು ತತ್ಸಮವಲ್ಲ, ತದ್ಭವ. ಟಿ.ವಿ. ನೋಡುವುದರ ಬದಲು, ಪರಿಸ್ಥಿತಿ ತಿಳಿಯಲು ಮತ್ತು ಇಂಥ ಸಮಯದಲ್ಲಿ ನಾಗರಾಜರಾಯರಿಗೆ ಕೈಲಾದ ಸಹಾಯ ಮಾಡಲು, ಮೇಲೆದ್ದು ಅವರ ಮನೆಕಡೆ ಹೊರಟೆ. ನನ್ನವಳು, ''ರ್‍ರೀ ಜೋಪಾನ. ಪೋಲಿಸ್‌ನವರು ಸಾಕ್ಷಿ, ಕೋರ್ಟು, ಸ್ಟೇಷನ್ ಅಂತ ಅಲೆಸುತ್ತಾರೆ ಜೋಪಾನ'' ಎಂದು ಕಣ್ಣಂಚಿನಲ್ಲಿಯೇ ಸೂಕ್ಷ್ಮ ಸೂಚಿಸಿದಳು. ನನ್ನವಳ ಕಣ್ಣುಗಳು ದೊಡ್ಡದು, ಬಾಯಿಯಂತೆ. ಅದಕ್ಕೆ ವಿಶಾಲಾಕ್ಷಿಯೆಂದು ಉಪನಾಮ ಕೊಟ್ಟಿದ್ದೇನೆ. ಬಾಯಿಗೆ ಉಪನಾಮ ಕೊಡುವ ಧೈರ್ಯ ಇನ್ನೂ ಬಂದಿಲ್ಲ.

ನಾನು ನಾಗರಾಜರಾಯರ ಮನೆಮುಂದಕ್ಕೆ ಹೋಗುವುದಕ್ಕೂ ಪೋಲಿಸ್

ಇನ್‌ಸ್ಪೆಕ್ಟರ್ ಅವರ ಕೈಕುಲುಕಿ ಜೀಪ್ ಹತ್ತಿ ಹೊರಡುವುದಕ್ಕೂ ಒಂದೇ ವೇಳೆಯಾಯಿತು. ನನ್ನನ್ನು ನೋಡಿ, ''ಬನ್ನಿ... ಬನ್ನಿ...'' ಎಂದು ಕೈಕುಲುಕಿ ಸ್ವಾಗತಿಸಿದರು. ನಾನು ಪೆದ್ದುಪೆದ್ದಾಗಿ ಅವರ ಮುಖವನ್ನು ನೋಡಿದಾಗ ಪರಿಸ್ಥಿತಿಯ ಗಂಭೀರತೆಯನ್ನು ತಿಳಿದು, ''ಈಗ ಬಂದಿದ್ದನಲ್ಲ ಅವನು ಇನ್‌ಸ್ಪೆಕ್ಟರ್ ಮನೋಹರ ಅಂತ. ನನ್ನ ಬಾಲ್ಯ ಸ್ನೇಹಿತ, ಚಡ್ಡಿ ದೋಸ್ತ್ ಅಂತಲೇ ಅನ್ನಿ. ಟ್ರಾನ್ಸ್‌ಫರ್ ಆಗಿದೆ, ನಮ್ಮ ಏರಿಯಾಕ್ಕೆ. ನೆನ್ನೆತಾನೇ ರಿಪೋರ್ಟ್ ಮಾಡಿಕೊಂಡನಂತೆ. ಇವತ್ತು ಸ್ಟೇಷನ್‌ಗೆ ಬಂದೊಡನೆ ನನ್ನ ನೆನಪಾಯ್ತಂತೆ. ನೋಡಿ ಹಾಗೆ ಓಡಿ ಬಂದಿದ್ದಾನೆ.'' ಎಂದಾಗ ನನ್ನ ನಾಲಿಗೆ ಕಹಿಯಾಯ್ತು. ವಿಷಯವೇ ಇಲ್ಲದಿದ್ದರೂ ಸಾಧಾರಣ ಸುದ್ದಿಯೆಂದು ಭವ್ಯವಾಗಿ ಉದ್ಭವಿಸಿ, ಬೆಳೆದು ಮೂರು ಮಹಿಳಾಮಣಿಗಳ ಮುಖವಾಣಿಯಾಗಿ ಒಂದೇ ರಸ್ತೆಯಲ್ಲಿನ ಒಂದು ಮನೆಯಿಂದ ಕೊನೆಯ ಮನೆಯವರೆಗೆ ಹಬ್ಬಾದ ಊಹಾಪೋಹಕ್ಕೆ ಬೆರಗಾದೆ!

ಆದರೂ ನನ್ನ ಮನೆಮುಂದೆ ಮೀನಾಕ್ಷಮ್ಮನವರು, ನಾಗವೇಣಮ್ಮ ಮತ್ತು ಲತಾಕುಲಕರ್ಣಿ ನಮ್ಮ ಕಡೆ ನೋಡುತ್ತಾ ಗುಸುಗುಸು ಮಾತನಾಡುತ್ತಲೇ ಇದ್ದರು.



ತಾಳು, ಅಷ್ಟು ಬೇಗ ಸ್ಕ್ರಾಲ್ ಮಾಡ್ಬೇಡ, ಲೆವಿನ್ಸ್ಕಿ ಹೇಳಿಕೆ ಪೂರ್ತಿ ಓದೋಣ

ನಿರೂಪಣೆ ಎಂದರೆ ಕತ್ತಿನ ಹಿಂಭಾಗ

– ನಿಸಾರ್

ಕಾರ್ಯಕ್ರಮ ನಿರೂಪಿಸಿದ್ದ ಆ ಚೆಲುವೆ ನಟಿಯ ನೀಳ ಹೆಕ್ಕತ್ತು
ಏರಿಸುತ್ತಿದೆ ಹಿಂದೆ ಕುಳಿತ ಅತಿಥಿವರ್ಯನ ಒಡಲಿನಾದ್ಯಂತ ಮತ್ತು.
ಅವಳ ಮಾತು ಬೆಣ್ಣೆಮಿದು, ಮಿಗಿಲು ಅದರ ಅಭಿವ್ಯಕ್ತಿಯ ಹದ,
ಅದಕಿಂತ ಆ ಸಪೂರೆಯ ದಂತನಯ ಕೊರಳ ಹಿಂಬದಿಯ ಕಣ್ಣಿನಾಮೋದ.
ಉದ್ರೇಕಿಸಿತ್ತು ಅವನ ನರನಾಡಿಗಳಲ್ಲಿ ಅದಮನೀಯ ಮದ.


''ಅರವತ್ತು ಜಿಗಿದ ವಯಸ್ಸಿನಿಳಿಜಾರಿನಲಿ ತರವೆ ನನಗೀ ತೆವಲಿನೇರು?
ದುರುಗುಟ್ಟಿರುವೆನಲ್ಲ ಹೀಗೆ, ಪ್ರೇಕ್ಷಕರೇನಂದುಕೊಂಡಾರು?''
ಎಂಬ ಮನಸಿನಳುಕು ಕೊಂಚವೂ ಇರದೆ
ಸಭ್ಯತೆ, ಸಂಕೋಚ ಕಳೆದು ಧಾರ್ಷ್ಟ್ಯದ ಪರದೆ,
ಹತ್ತಿಕ್ಕಲಾಗದೆ ಒತ್ತಾಯಿಸಿರುವ ಒಳಗಿನ್ನೊತ್ತನ್ನು
ಕಿಂಚಿತ್ತು ಕೀಳದೆಯೆ ಅಂಟಿಚೀಟಿಯಂತಂಟಿರುವ ಹಸಿದ ಕಣ್ಣನ್ನು
ದಿಟ್ಟಿಸಿದ್ದಾನೆ ಆ ಹದಿಹರಯದಂಗನೆಯ ಉನ್ಮಾದಕರ ಕತ್ತನ್ನು.

ಅವಳ ಮಾತಿಗೆ ನಗುತ್ತಿದ್ದರೆ ಜನ ಚಪ್ಪಾಳೆ ತಟ್ಟಿ ಹುಚ್ಚಾಗಿ,
ಅವಳ ದನಿ ಮಾತ್ರ ಕಿವಿಗೆ ಬೀಳುತ್ತಿರುವ ಇವನೂ
ಕಟ್ಟಿಸಿದ ಹಲ್ಲು ಕಿರಿಯುತ್ತಾನೆ ವಿನಾಕಾರಣ ಪೆಚ್ಚುಪೆಚ್ಚಾಗಿ.
ಯಾರ ಗೊಡವೆಯೂ ಇಲ್ಲದೆ
ಕಳೆದುಹೋಗಿದ್ದಾನೆ ಅವಳಲ್ಲೇ, ಅವಳಿಗೂ ಕೂಡ ಅರಿವಿಲ್ಲದೆ.
''ಸಾರ್, ನಿಮ್ಮ ಭಾಷಣವೀಗ'' ಎಂದಾಗ ಅವಳು ವಿನಯದಲಿ ಬಾಗಿ
''ಹಂ! ಏನಂದಿರಿ?'' ಎನ್ನುತ್ತಾನೆ ಪ್ರಶ್ನಾರ್ಥಕವಾಗಿ.
ಪುನರುಚ್ಚರಿಸಿ ಎಚ್ಚರಿಸಿದಾಗ ಹೋಗಿ ನಿಲ್ಲುತ್ತಾನೆ ಮೈಕಿನೆದುರು ಗಲಿಬಿಲಿಸಿ,
ನೀರಿಗೆ ಬಿದ್ದ ಜಿರಲೆಯಂತೆ ವಿಲವಿಲಿಸಿ -
ಭಾಷಣದ ಪೂರ್ವ ತಯಾರಿ ಕೈಕೊಟ್ಟಿರಲು.
ಏನೊ ಆಡಲು ಹೋಗಿ ಇನ್ನೇನೊ ಒದರಿ

ನಡುನಡುವೆ ತಡವರಿಸಿ ತೊದಲಿ ಬೆದರಿ
ಮೈ ಸ್ವಸ್ಥವಿಲ್ಲದ ಹುಸಿ ನೆವವೊಡ್ಡಿ, ನುಡಿಗೆ ಮಂಗಳ ಹಾಡಿ
ಹೋಗಿ ಕುಸಿದಂತೆ ನಟಿಸುತ್ತಾನೆ ಕುರ್ಚಿಯಲಿ ಬಾಡಿ.

ಮತ್ತೆ ಪ್ರಲೋಭಿಸುತ್ತದೆ ಅವಳ ಕುತ್ತಿಗೆಯ ಹರಿಣಿಮಾಟ,
ಪುನರಾರಂಭಿಸುತ್ತಾನೆ ಕಣ್ಣಿನ ಬೇಟೆ, ಹೂಡಿ ಬಾಣದ ನೋಟ.
ವಂದನಾರ್ಪಣೆಯ ಬಳಿಕ ಎದುರಿಗೆ ಬಂದ
ಅವಳ ಆಪ್ಯಾಯಮಾನ ವದನಾರವಿಂದ
ಈಕ್ಷಿಸುತ ಈ ಸುಸಂಸ್ಕೃತ ಕಾಮಾಂಧ:
''ನಿಮ್ಮ ನಿರೂಪಣೆ ಬಲು ಸುಂದರ, ಸೂರೆಗೊಳ್ಳುವಂತಿತ್ತು ಮನವ''ನೆಂದ.
''ಥ್ಯಾಂಕ್ಸ್, ಸಾರ್'' ಎಂದಳು, ಪ್ರಸಾದಿಸಿ ಅವನತ್ತ
ಗೌರವಮಿಶ್ರಿತ ಮೋಹಕ ನಗೆಯ ಚೆಂದನೆಯ ಮುಗುಳೊಂದ.

ನಿರೂಪಣೆ ಪದಕ್ಕೆ ಹೆಕ್ಕತ್ತೆಂಬ,
ಜಗತ್ತಿನ ಯಾವ ಭಾಷೆಯ ನಿಘಂಟಿನಲೂ ಸಿಗದ ಅರ್ಥದಾಲಂಬ
ಇವ ನೀಡಿದ್ದು ಅವಳಿಗೆ ತಿಳಿಯಲಿಲ್ಲ,
ತನ್ನ ಮೋಹತಾಡಿತ ಒಳಗಿನಿಂಗಿತವನ್ನಾಕೆಯ ಮುಂದೆ ತೋಡಲಿಲ್ಲ,
ಏಕೆಂದರೆ ಅದನಹವಾಲಿಸುವ ಧೈರ್ಯ ಅವನೆದೆಯಲ್ಲಿ ಮೂಡಲಿಲ್ಲ.



''ವಾಜಪೇಯಿಗೆ ಪಂಚಕನ್ಯಾ
ಸ್ಮರೇನಿತ್ಯಂ, ಅಂದ್ರೆ
ಸೋನಿಯಾ, ಮಾಯಾವತಿ,
ಶೀಲಾ ದೀಕ್ಷಿತ, ಮಮತಾ
ಮತ್ತು ಜಯಲಲಿತ ಅಂತ
ಹೇಳೋದು ಕೇವಲ
ಕುಚೋದ್ಯ ಕಣ್ರೋ''

ಪಾಪ!!

- ಡಾ॥ ಪ್ರಕಾಶ್

ಮೊನ್ನೆ ಒಬ್ಬ ಪೇಶೆಂಟು ಬಂದಿದ್ದ. ಯಾಕೋ ಎದೆ ಛಳಕು, ಸುಸ್ತು ಅಂದ. ಹೃದಯ, ಬಿ.ಪಿ. ಎಲ್ಲಾ ಸರಿಯಾಗೇ ಇದ್ದವು. ಆದರೂ, ಅವನ ಆತಂಕ ನೋಡಿ, ''ನೋಡಿ, ಒಬ್ಬರು ಕಾರ್ಡಿಯಾಲಜಿಸ್ಟ್ ಹತ್ರ ಹೋಗಿ ಒಂದ್ಸಲ ತೋರಿಸಿ ಬನ್ನಿ. ಅವರು ಎಕೋ ಸ್ಟಡಿ ಮಾಡಿ ರಿಪೋರ್ಟ್ ಕೊಡ್ತಾರೆ. ಆಮೇಲೆ ನೋಡೋಣ'' ಅಂದೆ. ಆತ ಹೋದ. ಮೂರು ದಿನ ಆದಮೇಲೆ ಬಂದ. ''ನೀವು ಹೇಳಿದ ಡಾಕ್ಟರ್ ಹತ್ರ ಹೋಗಿದ್ದೆ ಡಾಕ್ಟ್ರೆ, ಬಹಳ ಚೆನ್ನಾಗಿ, ನಿಧಾನವಾಗಿ ನೋಡಿದರು, ಪಾಪ!'' ಅಂದ. ''ನಿಂ ಹೃದಯ ಕಲ್ಲುಗುಂಡ್ ತರಹ ಇದೆ'' ಅಂತ ಬೆನ್ನು ತಟ್ಟಿ ಕಳಿಸಿದರು ಅಂತಲೂ ಸೇರಿಸಿದ!

ಅಲ್ಲ, ಆ ತಜ್ಞ ಚೆನ್ನಾಗಿ ನೋಡಿದ್ದೇನೋ ಸರಿಯೇ! ಆದರೆ ಈ ರೋಗಿ, 'ಪಾಪ!' ಅಂತ ಯಾಕೆ ಸೇರಿಸ್ದ ಸಫಿಕ್ಸು ಅಂತ ನನ್ನ ಮನಸ್ಸು ವಿಹರಿಸತೊಡಗಿತು. ನನ್ನ ಗೆಳೆಯ ವೈದ್ಯರನ್ನು ಕೇಳಿದೆ. ಅವರೆಲ್ಲ ಯುನಾನಿಮಸ್ಸಾಗಿ (ಯುನಾನಿ ಡಾಕ್ಟರಲ್ಲ!), ಇದೇ ಅನುಭವ ನಮಗೂ ಆಗಿದೆ!'' ಅಂತ ನಕ್ಕರು. ಕನ್ನಡ - ಕನ್ನಡ ಡಿಕ್ಷನರಿ ನೋಡಿದೆ. ಪಾಪ ಅಂದರೆ, ''ದೋಷ, ಅಪರಾಧ, ಅಪರಾಧ ಮಾಡುವುದು'' ಅಂತ ಇತ್ತು! ನನ್ನ ಸ್ನೇಹಿತ ಹೃದಯ ತಜ್ಞ, ಪಾಪಭೀರು, ಪಾಪ! ಅಪರಾಧ ಮಾಡೋ ತರಹದೋನಲ್ಲವೇ ಅಲ್ಲ!! ಹಾಗಾದರೆ ನನ್ನ ರೋಗಿ ಯಾಕೆ ಹೀಗೆ ಹೇಳಿದ? ಕನ್ನಡ ಪಂಡಿತರ ಹತ್ರ ಓಡಿದೆ! ಅವರು, 'ಪಾಪ' ಅಂದ್ರೆ ಸಿನ್ ಮಾತ್ರ ಅಲ್ಲಕಣೋ ಮಂಕೆ! ಯಾರಾದರೂ ಕಷ್ಟದಲ್ಲಿದ್ರೆ ಅವರನ್ನ ನೋಡಿ ಪರಿತಪಿಸ್ತೀವಲ್ಲ, ಆಗ ಹೃದಯದಿಂದ ಬರೋ ಪದಾನೇ 'ಪಾಪ'! ಅಂದ್ರು. ನನಗೆ ತೃಪ್ತಿ ಆಗಲಿಲ್ಲ! ಈ ಪದದ ಪ್ರಯೋಗದಲ್ಲಿ ಇರೋ ಗೂಢಾರ್ಥ ಹುಡುಕಲೇಬೇಕು ಅಂಥ ಹಿರಿಯ ವೈದ್ಯರ ಬಳಿ ಹೋದೆ. ಅವರು ನನ್ನ ಡೌಟನ್ನು ಕೇಳಿ, ನಸುನಕ್ಕು, ''ನೋಡಪ್ಪ, ನನಗೂ ಹೀಗೇ ಹೇಳ್ತಾರೆ, ಆದರೆ ನನ್ ಬಿಸಿ ಕೆಲಸದ ಗಲಾಟೇಲಿ ಇದರ ವಿಶ್ಲೇಷಣೆ ಮಾಡುಕ್ಕೆ ನನಗೆ ಟೈಂ ಇಲ್ಲ!'' ಅಂತ ಬ್ರಾಡ್ ಹಿಂಟ್ ಕೊಟ್ಟು, 'ನೆಕ್ಸ್ಟ್ ಕೇಸ್!' ಅಂದರು. ನಾನು ಹತಾಶನಾದೆ.

ಈ ರೀತಿ ಉತ್ಕಟ ಸಮಯಗಳಲ್ಲಿ ನನ್ನ ಸ್ನೇಹಿತ ಗುರು ಹತ್ರ ಸಹಾಯ ಬೇಡೋದು ಅತ್ಯಗತ್ಯ. ಅವನ ಮನೆಗೆ ಓಡಿದೆ. ಆಗತಾನೆ ಎಂ.ಟಿ.ಆರ್.ನಿಂದ ಬಂದು ಪ್ರಸನ್ನವದನನಾಗಿ ಕೂತಿದ್ದ. 'ಏನೋ, ಇಷ್ಟು ದೂರ?' ಅಂತ ಹುಬ್ಬೇರಿಸಿದ. ಅಷ್ಟು ಹೊತ್ತಿಗೆ ಅವನ ಮೊಮ್ಮಗು ಅಂಬೆಗಾಲಿಡುತ್ತ ಬಂತು!

ಅದನ್ನ ಎತ್ತುಕೊಂಡು, 'ಯಾವ ಅಂಕಲ್ ಬಂದಿದಾರೆ ನೋಡು ಪುಟ್‌ಪಾಪ!' ಅಂದ. ನನ್ನ ತಲೆ ಗಿರ್ರೆಂದಿತು. ಗಹನವಾದ ಅರ್ಥ ಹುಡುಕುತ್ತಿರುವಾಗ, ಈ ನ್ಯೂ ಡೈಮೆನ್ಷನ್ ನನಗೆ ಹೊಳೆದೇ ಇರಲಿಲ್ಲ!

ಸಂಜೆ ಹೊತ್ತಿಗೆ, ಒಂದು ಒರಿಜಿನಲ್ ಐಡಿಯಾ ಹೊಳೆಯಿತು. ನನ್ನ ಖಾಸಾ ಗೆಳೆಯ ಅರುಣ್ ಹತ್ರ ಹೋಗಿ ಕೇಳೋಣ! ಅವನು ಭಾರೀ ಬಿಸಿನೆಸ್ ಮಾಡ್ತಾನೆ. Street Smart ಅಂತಾರಲ್ಲ, ಆ ಕುಲದ ಅಧಿಪತಿ! ಅವನ ಮನೆಗೆ ಫೋನ್ ಮಾಡಿದೆ. 'ಬಾ, ಮಾತಾಡೋಣ' ಅಂದ. ಅವನ ಮನೇಲಿ ಟೀ ಕುಡಿಯುತ್ತ ನನ್ನ ಪ್ರಶ್ನೆ ಹಾಕಿದೆ. ಅವನು ಈ ಯಕ್ಷ ಪ್ರಶ್ನೆಯನ್ನ ಎದುರಿಸಿದ. ಸ್ವಲ್ಪ ಹೊತ್ತು ಆದಮೇಲೆ, ನಸುನಕ್ಕ. ''ನೋಡು ಮರೀ! ನಿನ್ ಪೇಶೆಂಟ್ ಹೋಗಿದ್ದು ತಜ್ಞನ ಹತ್ರ. ಅವರೆಲ್ಲ ಬಹಳ ಬ್ಯುಸಿಯಾಗಿರ್ತಾರೆ. ನಿಧಾನವಾಗಿ ಮಾತಾಡುಕ್ಕೆ ಸಮಯ ಇರುಲ್ಲ! ಚಕ್ ಚಕ್ ಅಂತ ಒಬ್ಬರಾದ ಮೇಲೆ ಒಬ್ಬರು ಪೇಶೆಂಟುಗಳನ್ನ ನೋಡಿ, ರಿಪೋರ್ಟ್ ಸೈನ್ ಮಾಡಿ ಕಳಿಸ್ತಾರೆ! ಅವರಿಗೆ ವ್ಯವಧಾನವಾಗಿ ನೋಡುಕ್ಕೆ ಸಮಯ ಇರುಲ್ಲ! ಈ ಟೈಂ ಈಸ್ ಮನಿ ಅನ್ನೋ ಜಗತ್ತಿನಲ್ಲಿ, ನಿನ್ ಪೇಶೆಂಟನ್ನ ನೀನು ಕಳಿಸಿದ ತಜ್ಞ ಈ ತರಹ ಕುಲಬಾಂಧವರ ರೀತಿ ನಡೆದುಕೊಳ್ಳಲಿಲ್ಲ! ಈ ಸೋಜಿಗ ನೋಡಿ, ನಿನ್ ಪೇಶೆಂಟಿಗೆ, 'ಈ ವೈದ್ಯ ಮಾಡರ್ನ್ ಜಗತ್ತಿನಲ್ಲಿ ಹೇಗೆ ಜೀವನ ಸಾಗಿಸಿ ಸಾರ್ಥಕನಾಗ್ತಾನೆ, ಅಂತ ಬಹು ಸಂದೇಹ, ಅನುಕಂಪ ಹುಟ್ಟಿದವು! ಅದಕ್ಕೇ ಅವನು 'ಚೆನ್ನಾಗಿ ನೋಡಿದರು, ಪಾಪ!' ಅಂದ.'' ಇದೆಲ್ಲ ಹೇಳುವಾಗ ಅರುಣ್ ಮುಖದಲ್ಲಿ ಯಾವುದೋ ಗಹನವಾದ ಜ್ಞಾನೋದಯ ಆದ ಸಂತಸ ತುಳುಕಾಡ್ತ ಇತ್ತು! 'ಸರಿ, ಬರ್ತೀನಿ, ಕ್ಲಿನಿಕ್‌ಗೆ ಲೇಟಾಗುತ್ತೆ!' ಅಂತ ಎದ್ದೆ. ಅರುಣ್, 'ಹೌದು, ನೀನು ಭಾನುವಾರಾನೂ ಕೆಲಸ ಮಾಡಬೇಕು, ಪಾಪ!' ಅಂದ!!

ಬಫೆ

ಬಫೆ ಸಿಸ್ಟಂ ಯಾಕೆ ಬಂದಿದ್ದು
ಗೊತ್ತಾ ಮಗು
ಅಂತಾ ಕೇಳಿದರು ಶಿಕ್ಷಕರು
ಮಗು ಹೇಳಿದ
'ಕೂತು ಉಂಡ್ರೆ ಕುಡಿಕೆ ಹೊನ್ನು ಸಾಲದು'
ಅದಿಕ್ಕೆ
'ನಿಂತು ಉಣ್ಣೊ ಬಫೆ ಬಂತು ನಾರ್' ಅಂದ.

– ಎಸ್.ಪಿ. ಗೌಡರ

ವಿಶೇಷಾಂಕ - ಒಂದು ಪ್ರತಿಕ್ರಿಯೆ

- ವಾಣಿ ಸುರೇಶ್

ಈ ಸಲದ ಹಾಸ್ಯೋತ್ಸವದ ದಿನ ಒಂದು ವರ್ಷಕ್ಕಾಗುವಷ್ಟು ನಗುವಿನ ಟಾನಿಕ್ ತಗೊಂಡು, ಮಾಮೂಲಿನ ಹಾಗೇ ಅದೇ ಗುಂಗಲ್ಲಿ ಹೊರಬಂದ ಅಪರಂಜಿ ಬಳಗದವರಿಗೆ ಇನ್ನೊಂದು ಬೋನಸ್ ಕಾದಿತ್ತು - ಹೊರಗಡೆ ಬುಕ್ ಸ್ಟಾಲ್‌ನಲ್ಲಿ ಅಪರಂಜಿ ಹಾಸ್ಯೋತ್ಸವ ವಿಶೇಷಾಂಕದ ಕೊಡುಗೆ ಮೃಷ್ಟಾನ್ನ ಭೋಜನವಾದ ಮೇಲೆ ಸದಕ್ಷಿಣ ತಾಂಬೂಲ ಕೊಟ್ಟಹಾಗೆ!

ರಾಶಿ-ರತ್ನರ ಗಾಢ ಸ್ನೇಹದ ನೆನಪುಗಳ ಅವರಂಥ ಹಿರಿಯ ಜೀವಗಳ ಜೀವನದ ಮೌಲ್ಯಗಳ ಬಗ್ಗೆ ಈ generation ನವರಿಗೆ ಗೊತ್ತಿಲ್ಲದೇ ಇದ್ದ ಅನೇಕ ಮಾಹಿತಿಗಳ ರತ್ನದ ರಾಶಿಯೇ ಹಾಸ್ಯ ವಿಶೇಷಾಂಕದಲ್ಲಿ ತುಂಬಿ, ತುಳುಕಿ, ಚೆಲ್ಲಾಡಿತ್ತು. ಸಾಹಿತ್ಯ ಪ್ರಿಯರಿಗೆ ಎಂಥಾ treat ಉ!

ಅದಷ್ಟೇ ಅಲ್ಲದೆ ಇನ್ನಿತರ ಹಾಸ್ಯ ಲೇಖನಗಳ ರಸಗವಳ ಬೇರೇ.....

''ಯಾಕೀಕರಣ''ದಲ್ಲಿ ಅಕಿಲ ಭೋವಿಪಾಳ್ಯದ ಥರುಣ ಕರ್ನಾಟಕ ಸಂಗದಲ್ಲಿನ ಕನ್ನಡ ರಾಜ್ಯೋತ್ಸವಕ್ಕೆ ಗಂಧದ ಚಕ್ಕೀ ಹಾರದಾಸೆಗೆ ಹೋಗಿ ಮೂರು ಮೂರು ಸಲ ಜಯ ಮಾಡಿಸಿಕೊಂಡು ಬಂದ ಶೀನೂರವರ ಅನುಭವ, ಈಗ ಮೊನ್ಮೊನ್ನೆ ತಾನೇ ಬೀದಿ ಬೀದಿಗಳಲ್ಲೂ, ಕೇರಿಕೇರಿಗಳಲ್ಲೂ, ಮುಗಿದ (ಸದ್ಯ!) ಮೈಕಾಸುರನ ಹಾವಳಿ, ಅದರಿಂದ ಕೊನೆಗೂ ಪಾರಾದೆವೆಂಬ ನೆಮ್ಮದಿಯ ನೆನಪನ್ನ ಕೆದಕಿತು...

ಇನ್ನು ಸಿ.ಆರ್. ಸತ್ಯರ ಮೇನಕಾ ಲಚ್‌ಮನ್‌ಸೀ ಒಂದು ಒಳ್ಳೆಯ ಹಾಸ್ಯಲೇಖನ. ಸತ್ಯರ ಕ್ಲಿಂಟನೀಯ ಪರಿಸ್ಥಿತಿ ನಮ್ಮಲ್ಲೂ ಅನುಕಂಪ ಉಕ್ಕಿಸಿತು. ದಯವಿಟ್ಟು ಅವರಿಗೆ ನಮ್ಮೆಲ್ಲರ support ತಿಳಿಸಿಬಿಡಿ.... ಅದೇನೋ ಹೇಳ್ತಾರಲ್ಲ ಹಾಗೆ 'ಗಾಣಗಿತ್ತಿ ಅಯ್ಯೋ ಅಂದರೆ...' ಅಂತ, ಹಾಗೇ, ನಮ್ಮ ಅನುಕಂಪ ಮಾತ್ರದಿಂದ ಅವರಿಗೆ ಡಾಬರ್‌ಮನ್ ಕಾಟ ತಪ್ಪತ್ಯೇ?! ಆದ್ರೂ, ಅಯ್ಯೋ ಪಾಪ...!

ಹಾಗೇ ಕುದುರೆ ರೇಸಿಗೆ ಹೋಗಿದ್ದನ್ನ ಮುಚ್ಚಿಡಕ್ಕೆ ಹೋಗಿ ಕ್ಯಾಬರೆ ಕುಣಿತದ ಬಗ್ಗೆ ಹೇಳಬೇಕಾಗಿ ಬಂದ ವಿಶ್ವನ ಪೇಚಾಟ, ಮೋಹನನ ಪರಿಸ್ಥಿತಿ ಬಗ್ಗೆ ಓದಿಯೂ ಅಷ್ಟೇ, ನಕ್ಕೂ ನಕ್ಕೂ ಸಾಕಾಯ್ತು. ಅಂತೂ ಅನುಮಾನದ ಮುದ್ದೆ ಮೀನನಂಥಾ ಹೆಂಡತೀರಿರೋವರ್ಗ್ಗೂ ಪಾಪ ಗಂಡಸರಿಗೆ ಹಾಯಾಗಿರಕ್ಕಾಗಲ್ವೇನೋ...

ನಕ್ಷತ್ರ ವೀಕ್ಷಣೆಯಿಂದ ಬಂದ ಸ್ಫೂರ್ತಿ, ನಮ್ಮಂಥಾ ಪಾಮರರಿಗೆ ಕಬ್ಬಿಣದ ಕಡಲೆ ತರಾ ಇರೋ ಭಾರತ, ಭಾಗವತಗಳಲ್ಲಿ ಇರಬಹುದಾದ ರೋಚಕ ಸತ್ಯಗಳ ಬಗ್ಗೆ analyse ಮಾಡಕ್ಕೆ ಕಾರಣ ಆಗಬಹುದೂಂತ ಈಗಲೇ ಗೊತ್ತಾದದ್ದು! sensor board membersಎ ಅಗ್ಬೇಕಿಲ್ಲ ಇಂಥಾ ಸ್ವಾರಸ್ಯವಾಗಿಯರೋ inner stories ಹೊರಗೆ ಬರಕ್ಕೆ ಅಂತನ್ನಿಸ್ತು!

ಇನ್ನೊಂದು ನಕ್ಷತ್ರ ವೀಕ್ಷಣೆಗೆ ಸಂಬಂಧಪಟ್ಟ ಅನುಭವಾನೇ ''ನಾಳೆ - ಇಂದು -ನಿನ್ನೆ'' ಅಷ್ಟೆಲ್ಲಾ publicise ಮಾಡಿಸಿಕೊಂಡ leonid show ನೋಡಕ್ಕೇಂತ ಮಾಗಿ ಛಳೀಲಿ ತಾರಸಿ ಮೇಲೆ ಚಾತಕ ಪಕ್ಷಿಗಳ ಹಾಗೇ (ಗೂಬೆಗಳ ಹಾಗೆ?) ತಲೆ ಎತ್ತಿಕೊಂಡು ಗಂಟೆಗಟ್ಟಲೆ ಕಾದಿದ್ದಕ್ಕೆ, ಕೆರಳಿದ ಆಸ್ತಮಾ ಮತ್ತು ಹೊಸದಾಗಿ cervical spondylosis ಬಂದಿದ್ದೇ ಲಾಭಾಂತ ಡಾಕ್ಟ್ರ bill ನೋಡಿ ಬೈಕೋತಿರ್ಬೇಕಾದ್ರೆ, ಗೌತಮರು ಮನೆ ಮಂದಿ ಸಮೇತರಾಗಿ ಮಜವಾಗಿ ಬಿಸಿ ಬಿಸಿ ಪಕೋಡ ಕುರುಕಿಕೊಂಡು ಕಾಯ್ತಾ ಕೂತಿದ್ದು ಓದಿ, ಪಕ್ಕದ್ಮನೆಯೋರ ಕೈಲಿ ಬೈಸಿಕೊಂಡಿದ್ದು ಕೇಳೀ-ನಮ್ಮ ತರದೋರು ಬೇರೆಯವರೂ ಇದ್ದಾರಲ್ಲ ಅಂತ ಖುಷಿಯಾಯ್ತು. ಅವರ ಅನುಭವಾನ second ಮಾಡಕ್ಕೆ ನಾವಿದ್ದೀವೀಂತ ಹೇಳಿದರೆ ಅವರಿಗೂ ಸ್ವಲ್ಪ ಸಮಾಧಾನವಾಗ್ಬಹುದೇನೋ.!

ಆಮೇಲೆ, ''ಪ್ರೇತ ಡಾಟ್ ಕಾಮ್'' ಇನ್ನೊಂದು ತುಂಬಾ ಇಷ್ಟ ಆದ ಲೇಖನ. ಸುಧನ್ವನ ಕಾರ್ಡಿಯಾಕ್ ಇನ್ವಾಲ್ವ್‌ಮೆಂಟ್‌ಗೆ ಕನ್‌ಸರ್ನ್ಡ್ ಆಗಿದ್ದ ಮಿಷನ್ ಅಕಂಪ್ಲಿಶ್ ಆಗಿದ್ದಿದ್ರೆ ಆದ್ರೂ, ಅವನು ತನ್ನ ಸೀಡೀ ಹಾಳು ಮಾಡ್ಕೊಂಡು ಅಷ್ಟೊಂದು ಲ್ಯುಕ್ರೇಟಿವ್ ಆಗಿದ್ದ ಸಾಫ್ಟ್‌ವೇರ್‌ನ sacrifice ಮಾಡಿದ್ದಕ್ಕೂ ಸಾರ್ಥಕವಾಗ್ತಿತ್ತೂನ್ನಿಸ್ತು... ಪಾಪ ವ್ರತ ಕೆಟ್ಟರೂ ಸುಖ ಪಡಲಿಲ್ಲ ಸುಧನ್ವ! ಏನು ಮಾಡೋದಕ್ಕಾಗತ್ತೆ ಎಲ್ಲಾ ಹಣೇಬರಹ... ಪಾರೀ ಅಂಥಾ ಲಿಬರೇಟೆಡ್ ಹುಡುಗೀರ್ಗೆ ಲೈನ್ ಹೊಡೆಯಕ್ಕೆ ಹೋಗೋರು ಇದಕ್ಕೆಲ್ಲಾ ಪ್ರಿಪೇರ್ ಆಗಿದ್ರೆ ಒಳ್ಳೇದೇನೋ ಅಲ್ವೇ... ಏನು ಮಹಾ, ಇನ್ನೊಂದ್ವರ್ಷ ಆಡಿದ ಹಾಗೆ ಕಳೆಯುತ್ತೆ. ಅಷ್ಟರಲ್ಲಿ ಅವನಿಗೆ ಬೇರೆ ಇನ್ನೊಂದು ಒಳ್ಳೆಯ ಸಾಫ್ಟ್‌ವೇರ್ develop ಮಾಡಕ್ಕಾಗಿ, ಪಾರೀ ತಲೇ ಮೇಲೆ ಹೊಡ್ಯೋ ಅಂಥಾ ಹುಡುಗಿ ಸಿಗಲೀಂತ wish ಮಾಡೋಣ. (ಒಂದು ಕಿವಿಮಾತು ಅವನಿಗೆ - ಮತ್ತೆ ಜಡೆಮುನಿ ಅವರ advanced gadgetsನ ತಂಟೇಗೆ ಹೋಗ್ದೇದ್ರೆ ಒಳ್ಳೇದು!)


ಕೆ. ಚಂದ್ರಮೌಳಿಯವರು ''ಒಂದ್ನಿಮಿಷ ನಕ್ಕಿದ್ದಕ್ಕೆ'', ದಿನವಿಡೀ ನಗ್‌ನಗ್ತಾ ಇರಕ್ಕೆ ಪ್ರಯತ್ನ ಪಡಕ್ಹೋಗಿ ಪಾಡು ಪಟ್ಟಿದ್ದಕ್ಕೆ ನಮಗೂ ಬೇಡ್‌ಬೇಡಾಂದ್ರೂ ನಗು ಬಂತು. ಯಾವ್ದು ಏನೇ ಆದ್ರೂ ಪಾಪ, ತೀರಾ ಅವರಾಫೀಸಿನ uncle titleಗೆ

ಆಯ್ಕೆಯಾಗಿದ್ದು ಮಾತ್ರ ತುಂಬಾ ಅನ್ಯಾಯ. ಅವರ ಹೆಂಡತೀ, ಮನೆ ಕೆಲಸದವಳೂ ಅವರೆಲ್ಲಾ ಎತ್ಲಾಗಾದ್ರೂ ಹೋಗಲಿ ಬಿಡೀ, ಟೀನಾನಿಂದ್ಲೂ ಅದೇ treatmentಉ ಅಂದ್ರೆ, ನಿಜವಾಗ್಩ೂ 'ಪಾಪ' ಅಲ್ಲದೇ ಇನ್ನೇನು ಹೇಳಿ.

ಹಾಗೆ "ವಾಸ್ತು ಚಿಂತನೇ"ನೂ ಎಂ.ಎಸ್.ಕೆ.ಯವರೇ coin ಮಾಡಿರೋ ಗಾದೆಯ - extension ನಂತೆ ("ಮನೆ ಕಟ್ಟಿನೋಡು... ಜೊತೆಗೆ ವಾಸ್ತೂನ ಒಪ್ಪಿಸಿ ನೋಡು") ಇಂದಿನ ಮನೆ ಕಟ್ಟುವವರ ವಸ್ತುಸ್ಥಿತಿಗೆ ತುಂಬಾ ರೆಲೆವೆಂಟ್ ಆಗಿದೆ. ವಾಸ್ತುಯಿಂದ ಕ್ರಿಯೇಟ್ ಆಗಿರೋ ಇಂದಿನ ಪ್ರಾಬ್ಲಂನ ಇಷ್ಟು ಲೈಟ್ ಆಗಿ ಹೇಳಿರೋದಕ್ಕೆ ಖುಷಿಯಾಯ್ತು.

ಕೊನೆಯದಾಗಿ, ವಿಂಟೇಜ್ ಕೊರವಂಜಿಯ ಅಂದಿನ ವ್ಯಂಗ್ಯ ಚಿತ್ರಗಳು, ನಗೆಹನಿಗಳ ಬಗ್ಗೆ ಎಷ್ಟು ಹೇಳಿದ್ರೂ ಕಡಿಮೇನೇ... ಇಂದಿನ ಕಿರಿಯರಿಗೆ ಶುದ್ಧ ತಿಳಿಹಾಸ್ಯ ಅಂದ್ರೆ ಎಷ್ಟು ಚೆನ್ನಾಗಿರತ್ತೆ ಅಂತ ತುಂಬಾ ಚೆನ್ನಾಗಿ ತಿಳಿಸಿಕೊಟ್ಟಿದ್ದೀರಾ. ಜೊತೆಗೆ ಕೊರವಂಜಿಯ fansಗೆ ಹಾಸ್ಯೋತ್ಸವದಂಥಾ ಸಂದರ್ಭದಲ್ಲಿ ಹಳೆಯದನ್ನೆಲ್ಲಾ reminiscence ಮಾಡ್ತಾ, ಅದೇ ವ್ಯಂಗ್ಯಚಿತ್ರಗಳನ್ನ ಇನ್ನೊಂದ್ಸಲ enjoy ಮಾಡ್ತಾ ಮೆಲಕು ಹಾಕುವ ಒಂದು opportunity...

ಒಟ್ಟಲ್ಲಿ ಜನವರಿ 99ರ ಅಪರಂಜಿ ಮೈಕೆ ತುಂಬಿಕೊಂಡು ಲಕ್ಷಣವಾಗಿ, ಹೊಸ ವರ್ಷದ ಶುಭಾಶಯಾನ ಅವಳ ಎಲ್ಲಾ ಬಳಗದವರಿಗೂ, ಆಸಕ್ತ(?) ಕನ್ನಡಿಗರಿಗೂ ಹೇಳಕ್ಕೆ ಸಂಭ್ರಮವಾಗಿ ಬಂದಿದ್ದಾಳೆ... ಅದಕ್ಕೋಸ್ಕರ ಶ್ರಮಿಸಿರುವ ನಿಮ್ಮೆಲ್ಲರಿಗೂ ಅಭಿನಂದನೆಗಳು.



"ಇಂಡಿಯಾ ಪಾಕಿಸ್ತಾನ್ ಮಾಚ್ಗೆ ಎಲ್ಲಾ ಸಿದ್ಧತೆಗಳೂ ಆದ ಹಾಗಾಯ್ತು"

ನಮ್ಮಮ್ಮ

– ಗುಂಡೂ ರಾ.ನಾ.

"Behind every successful man, there is a woman' ಅಂತ ಯಾವ್ರೊನೊ ಅಂದ್ನಂತೆ. ಅದು ನಿಜವಾದರೆ "there is a woman in front of every unsuccessful man' ಅಂತಾನೆ ಅರ್ಥ? ನಂಗೊತ್ತಿಲ್ಲಪ್ಪ, ನಂಗನ್ನಿದ್ದನ್ನ ನಾ ಹೇಳ್ತಿದ್ದೇನೆ... ಅಷ್ಟೆ.

ಅದು ಹೇಗಾದರೂ ಇರಲಿ, ನನ್ನ ಜೀವನದಲ್ಲಂತೂ ನಾಲ್ಕು ಜನ ಹೆಂಗಸರು ಇದ್ರು, ಈಗ ಮೂರು ಜನ ಇದ್ದಾರೆ all round me. ನಾನು successful ಓ ಅಥವಾ unsuccessfull ಓ ತಿಳಿಯೋದೇ ಕಷ್ಟವಾಗಿದೆ.

ಒಂದಂತು ನಿಜ, ಈ ನಾಲ್ಕು ಜನಾನು, ನನ್ನ ಮೇಲೆ ಖಂಡಾಪಟ್ಟೆ (ಇದು ಮಂಗಳೂರಿನವರಿಗೆ ಮಾತ್ರ ಸಾಮಾನ್ಯವಾಗಿ ಆಗುವ ವಿಷಯ) ಪ್ರಭಾವ ಬೀರಿದ್ದಾರೆ, ಬೀರ್‍ತಾ ಇದ್ದಾರೆ, ಬೀರ್‍ತಾನೇ ಇರ್‍ತಾರೆ, ನಾನಿರೋವರೆಗೂ.

ಒಟ್ನಲ್ಲಿ ಹೇಳೋದಾದರೆ, ನಾನು ಸಹ (ಈ) ನಾಲ್ಕು ಜನಕ್ಕೆ ಬೇಕಾದೋನೆ. ನಾಲ್ಕು ಜನಕ್ಕೆ ಬೇಕಾಗೋ ಕಾಲ ಈಗ ಇಲ್ಲ ಅನ್ನಿ, ಈಗ ಅಬ್ಬಬ್ಬಾ ಅಂದರೆ ನಾಲ್ಕು ಚಕ್ರಕ್ಕೆ ಬೇಕಾದೋನಾಗಬಹುದು. ಬಿಡಿ, ಆ ವಿಷಯ ಆಮೇಲಾಗಲಿ, ಅದಕ್ಕ ಇನ್ನೂ' ಟೈಂ ಇದೆ ಅಂತ ಕಾಣುತ್ತೆ. ಮಟ, ಮಟ ಶುರುವಿನಲ್ಲೇ ಯಾಕೆ ಇಂತಹ ವಿಷಯ.

ಮೇಲೆ ಹೇಳಿದ ನಾಲ್ಕು ಜನರೂ ಬಹಳ, ಬಹಳ ಮಹತ್ವದವರು. Basically, ಎಲ್ಲರೂ ನೋಡೋಕೆ ಒಂದೇ ತರಹ ಕಂಡರೂ, ಬುದ್ಧಿ ಭಿನ್ನ, ಮತ ಭಿನ್ನ, ಮಾತು ಭಿನ್ನ, ನಡತೆ ಭಿನ್ನ, ಅಷ್ಟೇ ಯಾಕೆ ಎಲ್ಲದರಲ್ಲೂ ಭಿನ್ನರು. ನಾಲ್ಕು ಜನಾನೂ ಒಂದೇ ಆದರೂ ನಾಲ್ಕು ದಿಕ್ಕು. ಇಲ್ಲಿ ಕಂಡೆ, unity is diversity ಅಂದ್ರೆ ಏನು ಅಂತ.

ಈ ನಾಲ್ಕು ಜನದ ಕೈಲಿ ಸಿಕ್ಕಿ ಹಾಕಿಕೊಂಡು - ನಲಿದೆ, ನುಲಿದೆ, ನರಳಿದೆ, ಜೀವನದಲ್ಲಿ ಯಾವಾಗಲೂ ಒಬ್ರಲ್ಲ ಒಬ್ರು ತಗುಲ್ಕೊಂಡು, ಬದುಕಿಗೆ ಒಂದು ತರಹಾ meaning ಬರೋ ಹಾಗೆ ಮಾಡಿದರು.

ಪೀಠಿಕೆ ಸಾಕಾ? 'ಎರಡೆ ಮಾತಾಡಿ ಮುಗಿಸ್ತೀನಿ ಅಂತ ಅಂದ ಮಂತ್ರಿಯ ಹಾಗೆ ಶುರು ಮಾಡ್ದೆ ಅಂತ ತಿಳೀಬೇಡಿ. ಇನ್ನೂ ಮುಖ್ಯವಾದ ವಿಷಯಕ್ಕೆ ಬಂದೆ. ಮೇಲೆ ಹೇಳಿದ ಮಹನೀಯರುಗಳು ಯಾರು ಅಂದ್ರ? ಅವರುಗಳು - ನಮ್ಮಮ್ಮ,

ನನ್ನ ಹೆಂಡ್ತಿ, ನನ್ನ ಮಗಳು ಮತ್ತು ನನ್ನ ಸೊಸೆ. ಇವ್ರೆಲ್ಲಾ ನನ್ನನ್ನು ಹೆಣಗಿಸಿ, ಶೋಷಿಸಿ, ಸುಖ, ಶಾಂತಿ ಕೊಟ್ಟಿದ್ದಾರೆ.

ಮೊಟ್ಟ ಮೊದಲಿಗೆ, ನನ್ನ ತಾಯಿ, ಮಹತಾಯಿ. ನನ್ನ ಈ ಪ್ರಪಂಚಕ್ಕೆ ತಂದು ಬಿಸಾಡಲು, ಬೇರೆ ಯಾವ ಕಾಲಾನೂ ಸೂಕ್ತವಲ್ಲವೆಂದು ತೀರ್ಮಾನಿಸಿ, ಎರಡನೇ ಮಹಾ ಯುದ್ಧವಾಗುತ್ತಿದ್ದ ಸಮಯಕ್ಕೆ ಸರಿಯಾಗಿ, ತಂದೆಸೆದಳು, ಕೇಳಬೇಕೆ war quality product ಉ, ಹೇಗಿರುತ್ತೆ ಅಂತ, ನೀವೇ ಊಹಿಸಿಕೊಳ್ಳಿ, ಹೇಳೋದೇಬೇಡ.

ದುರ್ಯೋಧನ ಹುಟ್ಟಿದಾಗ - ಕತ್ತೆ ಅರ್ಚಿತಂತೆ, ಗೂಬೆ ಕೂಗ್ತಂತೆ, ನಾಯಿ ಬೊಗಳ್ತಂತೆ, ಅದೇ ಭೀಮ ಹುಟ್ಟಿದಾಗ - ಆನೆ ಗೀಳಿಟ್ಟಿತಂತೆ, ಸಿಂಹ ಘರ್ಜಿಸಿತಂತೆ. ಅಯ್ಯೋ, ನಾನು ಹುಟ್ಟಿದಾಗ - ಮಹಾಯುದ್ಧದ ಹಾಹಾಕಾರ, ಆಟಾಟೋಪ, ಅಪನಂಬಿಕೆ, ಕೊಲೆ, ಸುಲಿಗೆ, ಒಂದೇ ಎರಡೆ? ದಯವಿಟ್ಟು ತಪ್ಪು ತಿಳಿಯಬೇಡಿ, ಮೇಲಿನ ಯಾವುದಕ್ಕೂ ನಾನಲ್ಲ ಕಾರಣ, ಹುಟ್ಟಿದ ಘಳಿಗೆ ಹಾಗಿತ್ತು ಅಷ್ಟೇ.

ಆದರೆ ನಮ್ಮಮ್ಮಂಗೆ ಯಾವುದರ ಪರಿವೆಯೂ ಇರಲಿಲ್ಲ. ಹಳ್ಳಿ ಮುಗ್ಧೆ. ಹೆಂಗ್ಸು ಅಂದ್ರೆ ಮಾತಿಲ್ಲದೆ ಹೆರೋದೊಂದೇ ಕೆಲ್ಸ ಅಂತ ತಿಳಿದಿದ್ದ ಕಾಲ. ಹೆತ್ಲು, ಹಾಯಾಗಿದ್ಲು. Triple antigen ಎ? Pulse Polio ನೇ? DPT ಮೂರು ಸಲಾನೇ? Anti ಅದೇ? Anti ಇದೇ? ಏನೂ ಕೇಳಬೇಡಿ. ಹುಟ್ಟಿದ ಮಕ್ಕಳು ಬದುಕೇ ಬದುಕುತ್ತೆ, ಇಲ್ದಿದ್ದರೆ ಸಾಯುತ್ವೆ ಅಷ್ಟೇ, ಅನ್ನೋ ಶಾಂತ ಪರಿಸ್ಥಿತಿ. ಹೊಡ್ಕೊಂಡಾಗ ಹಾಲು ಕೊಡೋದು, (ರೀ ಆವಾಗ ಹೆಂಗಸ್ರು ಮಕ್ಕಳಿಗೆ ಹಾಲು ಕೊಡ್ತಾ ಇದ್ದರಂತೆ, ಗೊತ್ತಾ? ಏನು ಕಾಡು ಜನಾರಿ ಅವರು?) ಇಲ್ದಿದ್ರೆ ಅವಳ ಕೆಲಸ ಅವಳು ಮಾಡ್ಕೊಂಡಿರೋದು.

ನಂಜುನಾಲಿಗೆಯ ನಂಜಮ್ಮ ನಮ್ಮಮ್ಮನ ಅತ್ತೆ, ಅಂದ್ರೆ ನನ್ನ ಅಪ್ಪಮ್ಮ, ಅಪ್ಪನ ಅಮ್ಮ. ಒಂದು ದಿನ ಸಹ, ಅತ್ತೆಯ ಮುಂದೆ ನಿಂತು ವಾದಿಸಿದ್ದು, ಕಾಣೇ ಕಾಣೆ, ನನಗೆ ಬುದ್ಧಿ ಬಂದ ಮೇಲೆ - ಅರೆ, ಅದು ಯಾವಾಗ ಬಂತು ಅಂತ ಆಶ್ಚರ್ಯ ಪಡಬೇಡಿ, ಎಲ್ರೂ ಹೇಳೋ ಹಾಗೆ ನಾನೂ ಹೇಳಿದೆ ಅಷ್ಟೆ.

ಮನೆ ತುಂಬ ಮೈದ, ನಾದಿನೀರು, ಮಕ್ಕಳು, ಮುದುಕರು, ಮೋಟರು ಎಲ್ಲಾ ಇದ್ದರು. ಒಬ್ಬಬ್ಬರು ಒಂದೊಂದು ತರಹ ಒಂದೊಂದು ದಿಕ್ಕು, ಮನೆಗೆ ಒಂದು ತರಹಾ ದೊಡ್ಡ ಸೊಸೆ ನಮ್ಮಮ್ಮ. ಮೂಗಿಗೆ ಕವಡೆ ಕಟ್ಕೊಂಡು, (ಅದನ್ನ ನಾನು ನಿಜವಾಗಿ ನೋಡಿರ್ಲಿಲ್ಲಪ್ಪ) ಎಲ್ಲರನ್ನು ಸವರಿಸಿಕೊಂಡು, ಮಾತಾಡದೆ, ನಮ್ಮ ಮನೇನ ಮನೆ ಮಾಡಿದಳು. ಮಾಡಿ ತೋರಿಸಿದಳು ನನಗೆ, ಹೇಗೆ ನಾಲ್ಕು ಜನರ

ಜೊತೆ ಹೊಂದಿಕೊಂಡು ಬಾಳಿ ಬದುಕಬೇಕು ಅನ್ನೊ ಪಾಠಾನ. She preached the principle by practicing the same. ಬರೀ ಬಾಯ್ಮಾತಿಂದಲ್ಲ.

ಆರಕ್ಕೆ ಹೋಗಲಿಲ್ಲ, ಮೂರಕ್ಕೆ ಬರಲಿಲ್ಲ - Balanced life ಉ. ಕಷ್ಟ ಅನ್ಲಿಲ್ಲ, ಹೊರನೋಟಕ್ಕೆ ಏನೂ ಸಾಧಿಸದೆ, 84 ವರುಷ ಬದುಕಿ ಹಾಯಾಗಿ ಕಣ್ಮುಚ್ಚಿದಳು, ಎಲ್ಲಾ original parts ಸಹಿತ. ಸತ್ತು ಸಂಪಿಗೆ ಮರ ಆಗಿರಬೇಕು ನಮ್ಮಮ್ಮ. ಯಾತಕ್ಕೆಂದರೆ, ಅವಳಿಗೆ nasal problem ಇತ್ತು. ಹೂವಿನ ವಾಸನೆ ಅಂದ್ರೆ ಅಲರ್ಜಿ ಇತ್ತು, ಅದಕ್ಕೆ.

ದೂರ ನಿಂತು ನೋಡಿದಾಗ, ನಮ್ಮಮ್ಮ ನಂಗೆ ಅದೆಷ್ಟು ಪಾಠ ಹೇಳಿಕೊಟ್ಟಿದ್ದಳು ಅನ್ನೋದು ಅರಿವಾಗುತ್ತೆ. ಹುಡುಗ ಆಗಿದ್ದಾಗ, ಅವಳ ಮಾತನ್ನು ಕೇಳದಿದ್ದಾಗ, ಯಾರಿಗೂ ಕಾಣದ ಹಾಗೆ, silent ಆಗಿ 'ಒಳಚುಂಟಿ' ಕೊಡ್ತಿದ್ದಿದ್ದು, ಇನ್ನೂ ಮರ್ರ್ಯೋಕೆ ಆಗಿಲ್ಲ. ನಿಮ್ಗೂ ನಿಮ್ಮಮ್ಮ 'ಒಳಚುಂಟಿ' ಕೊಟ್ಟಿದ್ದರೆ ನೀವು ಸಹ ಮರ್ತಿರಲ್ಲ, ನಂಗೊತ್ತು. ಇಲ್ಲದಿದ್ದಕ್ಕೆ ಅಳ್ತಾ, ಇರೋದನ್ನ ಅನುಭವಿಸ್ದೇ ಇರ್ಬಾರ್ದು, ಅನ್ನೋದನ್ನ ಹಳ್ಳಿ ಭಾಷೇಲಿ simple ಆಗಿ ಹೇಳ್ಕೊಟ್ಟು ಹೋದಳು.

ಅದೇ ನಮ್ಮಪ್ಪ, ಆಗ್ತಾನೆ ತೊಳೆದ ಕೆಂಡದ್ಹಾಗೆ ಇದ್ದರು. ಯಾವಾಗಲೂ ಬಲು ಬಿಸಿ ಹಾಗೂ busy. ಅವ್ರು, ಅವರ್ದೇ ಆದ ಪ್ರಪಂಚದಲ್ಲಿ, ಉಳಿದವರ್ಯಾರ ಪರಿವೆಯೇ ಇಲ್ಲದೆ ವಿಹರಿಸುತ್ತಿದ್ದರು. ಮಾತಿಗ್ಮುಂಚೆ ಕೆಟ್ಟ ಕೂಪ, Action first - Talk next ಅನ್ನೊ ಸಿದ್ಧಾಂತ ಅವರ್ದು. ನನ್ನನ್ನೇನಾದರು ಮರ್ರು ಕರೆದರೆ, ಅವರ್ಮುಂದೆ ಹೋಗಿ ನಿಲ್ಲೋದರ ಒಳಗೆ, ಹರ್ಕ್ನಿಕ್ಕರ್ರೆಲ್ಲಾ ಒದ್ದೆ. ಇಂತಹ ಗಂಡನ ಹೆಂಡತಿಯಾಗಿ ಬದುಕಿದಳು ನಮ್ಮಮ್ಮ 66 ವರುಷಗಳು ಅಂದ್ರೆ ಆಶ್ಚರ್ಯ ಅಲ್ಲ ಅಲ್ಲವೆ? ಈಗಿನ ಹುಡುಗೀರ್ಗೇನಾದರೂ ನಮ್ಮಪ್ಪನಂತಹ ಗಂಡ ಸಿಕ್ಕಿದರೆ, divorce ಆಗಿ 67 ವರುಷವಾಗಿರ್ತಿತ್ತು. ಆದರೆ ನಮ್ಮಮ್ಮ ಹಾಗಲ್ಲ. ಅರೆ, ಈ ಗಂಡನ್ನ 'ಹೀಗೆ' ಅಂತ ಬಿಟ್ಟರೆ, ಇನ್ನೊಬ್ಬ 'ಹಾಗೆ' ಇರ್ತಾನೆ. ಹಾಗಂತ ಜೀವನದಲ್ಲಿ ಎಷ್ಟು ಗಂಡನ್ನ change ಮಾಡೋಕಾಗುತ್ತೆ. ಹಾಗೆ ಮಾಡಕ್ಕೆ ಏನು ನಮ್ಮಮ್ಮ Liz Taylorಎ? ಇಲ್ಲ, ಇಲ್ಲ, ಪಾಲಿಗೆ ಬಂದದ್ದೇ ಪರಮಾನ್ನ. ಈ ಜನ್ಮಕ್ಕೆ ಇಷ್ಟೇ, ಅಂತ, ತುಟಕ್ ಪಿಟಕ್ ಅನ್ನದೆ ಬದುಕಿದಳು ಶಾಂತವಾಗಿ., co-operate ಮಾಡಿದಳು. ಅದೇ ಅವಳ teaching in silence ನ ಕರಾಮತ್ತು.

ಇಷ್ಟೆಲ್ಲಾ ಹೇಳ್ದ ಮೇಲೆ, ನಮ್ಮಮ್ಮ, ನಮ್ಮಪ್ಪನ್ನ ಕಷ್ಟದಿಂದ ಸಹಿಸಿದಳು ಅಂತ ಅನ್ಕೋಬೇಡಿ. ಗಂಡನ ಸಹವಾಸಾನ ಸಂತೋಷದಿಂದ ಅನುಭವಿಸಿದಳು. ಸಾಯೋ ಕಾಲಕ್ಕೆ, ತುಂಬು ವಯಸ್ಸಿನ ಮುದುಕರು, ಹತ್ಹತ್ತಿರ ಕೂತ್ಕೊಂಡು,


ಮಾತಾಡ್ತಾ, ಅನುಭವಗಳನ್ನು ಹಂಚ್ಕೊಳ್ಳುತ್ತಾ, ಶಾಂತವಾಗಿ ಕೂತಿದ್ದನ್ನ ನೆನಸಿಕೊಂಡರೆ, ಅವರಿಬ್ಬರು ಯಾವ ರೀತಿ 'ಆದರ್ಶ ದಂಪತಿಗಳು' ಆಗಿದ್ದರು ಅನ್ನೋದು ತಿಳಿಯುತ್ತೆ.

ರಕ್ತಿಯೆಲ್ಲಾ ಹುದುಗಿ, ಕೈಲೇನೂ ಹರಿದಿದ್ದಾಗ, ಕೋಪ, ತಾಪ, ಎಲ್ಲಾ ಮಾಯವಾದಾಗ ನಮ್ಮಪ್ಪಂಗೆ ಸಿಕ್ಕಿದ್ದು, ಪ್ರೀತಿಯ company ಅಂದ್ರೆ, ನಮ್ಮಮ್ಮಂದೊಂದೆ. ಎಷ್ಟು ಚೆನ್ನಾಗಿ company ಕೊಟ್ಳು ಅಂದ್ರೆ ಮೊದಲು ನಮ್ಮಪ್ಪ ಸತ್ತಿದ್ದನ್ನು ಯಾರೂ ಅವಳಿಗೆ ಹೇಳದಿದ್ರೂನೆ, ಒಳಗಣ್ಣಿಂದ ಕಂಡು, ಗಂಡ ಹೋದ ಆರು ದಿನದಲ್ಲೆ ಹೊರಟು ಹೋದಳು. ಅಲ್ಲಿ ನಮ್ಮಪ್ಪಂಗೆ company ಕೊಡುಕ್ಕೆ!

ನೀವೆ ಹೇಳಿ, ನಮ್ಮಮ್ಮನ ಕಾಲ ಹೇಗಿತ್ತು? ಅಂತ. ಸಂಸಾರದಲ್ಲಿ ಶಾಂತಿ ಇರಬೇಕಾದ್ರೆ 'ನಾವೆಲ್ಲ ಮನುಷ್ಯರು, ಎಲ್ರೂ ಒಂದಲ್ಲ ಒಂದ್ಸಲ ತಪ್ಪು ಮಾಡ್ತೇವೆ, ಸಹಿಸಿಕೊಂಡು ಬಾಳಬೇಕು.

ಪ್ರಪಂಚ ನಮಗೆ ಬೇಕಾದ ಹಾಗೆ ಇರೊಲ್ಲ, ನಾವು ಪ್ರಪಂಚಕ್ಕೆ ಬೇಕಾದ ಹಾಗೆ ಇರಬೇಕು, ಇರೋದನ್ನ ಕಲೀಬೇಕು. ನಾವೇನಾದರೂ ಪ್ರಪಂಚನ್ನ ತಿದ್ದೋಕೆ ಹೋದರೆ ಬಂತು ನೋಡಿ, ಪೀಕಲಾಟ, ಅನ್ನೊ ಮಾತನ್ನ ಆಡದೆ, ಮಾಡಿ ತೋರ್ಸಿ ಮಡಿದಳು.

ಇನ್ನು ನಮ್ಮಮ್ಮಂದಾಯ್ತಲ್ಲ? ಮುಂದಿನ ಸಲ ನೋಡೋಣ ನನ್ನ ತಿನ್ತಿರೋ ಮತ್ತೊಂದು ವ್ಯಕ್ತಿಯ ಅನುಭವಾನ.



ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಬೇಕು?

– ಶಿವು

ಇದೊಂದು ಇಂಟರ್ನೆಟ್ ಪ್ರಶ್ನೆ. ಈಚಿನ ಗಣತಿ ಪ್ರಕಾರ ಈ ಪ್ರಶ್ನೆಗೆ ಬಂದ ಉತ್ತರಗಳು ದಶಲಕ್ಷವನ್ನು ಮೀರಿವೆಯಂತೆ. ಇದರ ಜನಪ್ರಿಯತೆಗೆ ಕಾರಣ? ನಿಮಗೇ ತಿಳಿಯುತ್ತೆ, ಕೆಳಗಿನ ಪ್ರಶ್ನೆಗಳನ್ನು ಓದಿ.

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಹೆಬ್ಬಿ ಗುಬ್ಬಾಲೆಯೋರು ಬೇಕಾಗುತ್ರೀ?

★ **ಐದು- ಒಬ್ಬ ಬಲ್ಬ್ ಹಿಡಿಯೋಕ್ಕೆ. ಇನ್ನು ನಾಲ್ಕು ಜನ ಅವನು ನಿಂತಿರೋ ಮೇಜನ್ನ ತಿರುಗಿಸೋಕ್ಕೆ.**

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಸರ್ಕಾರೀ ನೌಕರರು ಬೇಕಾಗುತ್ತೆ?

★ **ಮೂರು- ಒಬ್ಬ ಲಂಚ ಕೊಡುಕ್ಕೆ- ಒಬ್ಬ ಬಲ್ಬ್ ಬದಲಿಸೋಕ್ಕೆ- ಒಬ್ಬ ''ಸಾರ್, ನಿಮ್ಮಂಥ ಕರುಣಾಳುಗಳು ಈ ಜಗತ್ತಿನಲ್ಲೇ ಇಲ್ಲ'' ಅಂತ ಅವನನ್ನ ಹಾಡಿ ಹೊಗಳೋಕ್ಕೆ.**

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ರಾಜಕಾರಣಿಗಳು ಅಗತ್ಯ?

★ **ಎಷ್ಟು ಜನರಿಂದಲೂ ಸಾಧ್ಯವಿಲ್ಲ- ಯಾಕೆ ಅಂದ್ರೆ ಒಬ್ಬ ಬಲ್ಬ್ ಬದಲಿಸಲು ಮೇಜು ಹತ್ತಿದರೆ, ಹತ್ತು ಜನ ಅವನ ಕಾಲೆಳೆಯಲು ಸಿದ್ಧರಿರ್ತಾರೆ.**

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಯೆಂಡ್ಕುಡ್ಕರು ಬೇಕಾಗುತ್ತೆ?

★ **ಇಪ್ಪತ್ತೊಂದು. ಒಬ್ಬ ಬಲ್ಬ್ ಹಿಡಿಯೋಕ್ಕೆ. ಮಿಕ್ಕ ಇಪ್ಪತ್ತು ಜನ ರೂಮು ತಾನಾಗಿಯೇ ತಿರುಗೋತನಕ ಕುಡೀತಾನೇ ಇರುಕ್ಕೆ.**

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಸಿನಿಮಾ ತಾರೆಯರು ಬೇಕಾಗಬಹುದು?

★ **ಮೂರು. ಒಬ್ಬಳು ಕ್ಯಾಮೆರಾ ಹಿಡಿಯೋಕ್ಕೆ, ಒಬ್ಬಳು ರಿಪೋರ್ಟ್ ಬರೆಯೋಕ್ಕೆ, ಮತ್ತೊಬ್ಬಳು ಬಲ್ಬ್ ಬದಲಿಸೋಕ್ಕೆ.**

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಗೂಂಡಾಗಳು ಬೇಕು?

★ **ಎಂಟು. ಯಾಕೆ ಅಂತ ಕೇಳ್ಬೇಡ ಹುಷಾರ್!**

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಕಾಲೇಜ್ ತರುಣೀರು ಬೇಕು?

★ ಇಬ್ಬರು. ಒಬ್ಬಳು ಫ್ರಿಜ್‌ನಿಂದ ಫಾಂಟಾ ತೆಗೆಯೋಕ್ಕೆ, ಮತ್ತೊಬ್ಬಳು "ಡ್ಯಾಡೀ" ಅಂತ ಕರೆಯೋಕ್ಕೆ.

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಮನೆಯೊಡತೀರು ಬೇಕು?

★ "ಇಂಥಾ ಕೆಲಸಾ ಎಲ್ಲಾ ನಮ್ಮ ಯಜಮಾನರೇ ಮಾಡೋದು. ಸ್ವಲ್ಪ ತಾಳಿ. ಅವರ್ನೇ ಕರೀತೀನಿ"

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಲಲ್ಲೂ ಯಾದವ್‌ಗಳು ಬೇಕು?

★ ಎಷ್ಟು ಜನರಿಂದಲೂ ಸಾಧ್ಯವಿಲ್ಲ. ಯಾಕೇಂದ್ರೆ ಹದಿನೈದನೇ ಶತಮಾನದಲ್ಲಿ ಲೈಟ್ ಬಲ್ಬ್‌ಗಳೇ ಇರಲಿಲ್ಲವಲ್ಲಾ.

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ದಾರ್ಶನಿಕರು ಬೇಕಾಗುತ್ತೆ?

★ ದಾರ್ಶನಿಕರು ಬಲ್ಬ್ ಬದಲಿಸೋದಿಲ್ಲ. ಬಲ್ಬ್ ಬದಲಿಸೋ ಅಗತ್ಯ ಏನಿದೇ ಅಂತ ಚರ್ಚೆ ಮಾಡೋದ್ರಲ್ಲೇ ಕಾಲ ಕಳೀತಾರೆ.

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಕಂಪ್ಯೂಟರ್ ಗೀಳಿನೋರು ಬೇಕಾಗುತ್ತೆ?

★ ಒಬ್ಬ ಸಾಕು. ಆದ್ರೆ ಅವನು ಮೊದಲು ಅಂಗಡಿಗೆ ಹೋಗಿ ಒಂದು ಲೈಟ್ ಬಲ್ಬ್ ಅಡಾಪ್ಟರ್ ಕಾರ್ಡ್ ಕೊಳ್ಳಬೇಕಾಗುತ್ತೆ.

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಪಾಕೀಸ್ಥಾನಿಗಳು ಬೇಕಾಗಬಹುದು?

★ ನಾಲ್ಕು ಜನ - ಒಬ್ಬ ಇದೇ ನೆಪ ಮಾಡಿಕೊಂಡು ಅಮೆರಿಕಾದಿಂದ ನೆರವು ಕೇಳೋಕ್ಕೆ. ಇನ್ನೊಬ್ಬ ಹಳೇ ಬಲ್ಬ್ ಕೆಡೋಕ್ಕೆ ಭಾರತದ ಗೂಢಚಾರರೇ ಕಾರಣ ಅಂತ ಕೂಗಾಡಿ, ಚೀನಾದಿಂದ ಕ್ಷಿಪಣಿ ತರಿಸೋಕ್ಕೆ. ಮಗದೊಬ್ಬ ಇದಕ್ಕೆಲ್ಲಾ ಕಾಶ್ಮೀರಾನೇ ಕಾರಣ ಅಂತ ವಿಶ್ವಸಂಸ್ಥೆಲಿ ಚೀರಾಡೋಕ್ಕೆ. ಕೊನೆಯೋನು ಬಲ್ಬ್ ಬದಲಿಸೋದಕ್ಕೆ.

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ವ್ಯಾಕರಣ ಶಾಸ್ತ್ರಜ್ಞರು ಬೇಕು?

★ ಲೈಟ್ ಬಲ್ಬ್‌ನ ಯಾಕ್ರೀ ಬದಲಿಸಬೇಕು? ಡಾರ್ಕ್ ಬಲ್ಬ್‌ನಲ್ಲವೇ ಬದಲಿಸಬೇಕಾದ್ದು?

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಸಾಫ್ಟ್‌ವೇರ್ ತಜ್ಞರು ಬೇಕು?

★ ಅದು ಹಾರ್ಡ್ ವೇರ್ ತಜ್ಞರ ಕೆಲಸ.

- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಕಳ್ಳರು ಬೇಕಾಗುತ್ತೆ?
★ ಬೇಕಾಗೋದೇ ಇಲ್ಲ. ಕಳ್ಳರು ಯಾವಾಗಲೂ ಕತ್ತಲಲ್ಲೇ ಕೆಲಸ ಮಾಡೋದು.
- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಅಕೌಂಟೆಂಟ್‌ಗಳು ಬೇಕು?
★ ಇಬ್ಬರು- ಒಬ್ಬ ರಾಮನ ಬಲ್ಬ್ ತೆಗೆಯೋಕ್ಕೆ, ಇನ್ನೊಬ್ಬ ಕೃಷ್ಣನ ಬಲ್ಬ್ ಹಾಕೋಕ್ಕೆ.
- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಕವಿಗಳು ಬೇಕಾಗುತ್ತೆ?
★ ಇಬ್ಬರು- "ನಂದಿಹುದು, ನಂದಿಹುದು ಕತ್ತಲೆಯ ತಾಪ, ಉರಿಯಲಿದೆ, ಉರಿಯಲಿದೆ, ಹೊನ್ನ ಸಿರಿ ದೀಪ" ಅಂತೆಲ್ಲಾ ಕವನ ಬರೆಯೋಕ್ಕೆ, ಇನ್ನೊಬ್ಬ ಬಲ್ಬ್ ಬದಲಿಸೋಕ್ಕೆ.
- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಕುರುಡರು ಬೇಕಾಗಬಹುದು?
★ ಅದು ಸ್ವಿಚ್ ಆನ್ ಆಗಿದೆಯೋ, ಅಥವಾ ಆಫ್ ಆಗಿದೆಯೋ ಅನ್ನೋದನ್ನ ಅವಲಂಬಿಸಿರುತ್ತೆ.
- ಲೈಟ್ ಬಲ್ಬ್ ಬದಲಿಸಲು ಎಷ್ಟು ಜನ ಪೋಲೀಸ್ ಅಧಿಕಾರಿಗಳು ಬೇಕಾಗುತ್ತೆ?
★ ಮೂರು- ಒಬ್ಬ "ಪರಿಸ್ಥಿತಿ ಶಾಂತವಾಗಿದೆ" ಅಂತ ಆಶ್ವಾಸನೆ ಕೊಡುಕ್ಕೆ. ಇನ್ನೊಬ್ಬ ಬಲ್ಬ್ ಬದಲಿಸೋನಿಂದ ಮಾಮೂಲು ಎಷ್ಟು ವಸೂಲಿ ಮಾಡಬೇಕು ಅಂತ ನಿರ್ಧರಿಸೋಕ್ಕೆ. ಮತ್ತೊಬ್ಬ ಬಲ್ಬ್ ಬದಲಿಸೋ ಇಲೆಕ್ಟ್ರೀಷಿಯನ್ ಅನ್ನ ಹೆದರಿಸಿ ಹಿಡ್ಕೊಂಡು ಬರೋಕ್ಕೆ.

★★★

ಅಕೌಂಟ್

ನನ್ನವಳು ನನಗೊಂದು
ಬ್ಯಾಂಕ್
ಆ ಬ್ಯಾಂಕ್‌ಲ್ಲಿ ನನ್ನದೊಂದೇ
ಅಕೌಂಟ್
ಸ್ವಲ್ಪ ಅಸಲಿಗೆ
ಬಡ್ಡಿಯೇ ಹೆಚ್ಚು

- ಎಸ್.ಪಿ. ಗೌಡರ

''ತುಮ್ಮು'' ವುದು!

ಗಾಯತ್ರಿ

(ತೆಲುಗಿನಲ್ಲಿ 'ತುಮ್ಮು'ವುದು ಎಂದರೆ ಸೀನುವುದು. ಮುಂದಿರುವ ಸಂಭಾಷಣೆ ತೆಲುಗಿನಲ್ಲಿ ನಡೆದಿದ್ದು. ಅದೊಂದು ಪದವನ್ನು ಬಿಟ್ಟು ಮಿಕ್ಕೆಲ್ಲವನ್ನೂ ಕನ್ನಡಾಂತರಿಸಲಾಗಿದೆ.)

ಶರವೇಗದ ರೈಲಿನ ಶಯನಾಗಾರ ಡಬ್ಬಿಯಲ್ಲಿ, ಸಾಯಂಕಾಲ 6.30 ಘಂಟೆಗೆ ದೆಹಲಿಗೆ ಪ್ರಯಾಣಿಸುತ್ತಿದ್ದೆ. ನನಗೆ ದೂರ ಪ್ರಯಾಣಗಳೆಂದರೆ ಬಹಳ ಇಷ್ಟ. ಅನೇಕ ವಿಷಯಗಳನ್ನು ಮೆಲುಕು ಹಾಕುವುದು, ಏನೇನೋ ಗಾಳಿಗೋಪುರಗಳನ್ನು ಕಟ್ಟುವುದು, ಬಾಕಿ ಇರುವ ಕೆಲಸಗಳನ್ನೆಲ್ಲಾ ಮಾಡಿಮುಗಿಸುವುದು, ಬೇಡದೇ ಇರುವುದನ್ನು ಹಾಗೇ ಮೂಲೆಗೆ ತಳ್ಳುವುದು, ಹಿಂದೆ ಬಿಟ್ಟುಬಂದ ಮನೆ, ಸಂಸಾರವನ್ನು ನೆನೆಸಿಕೊಂಡು ನಾನಿಲ್ಲದೇ ಮನೆಯವರು ಪಡುವ ಪಾಡನ್ನು ನೆನೆಸಿಕೊಂಡು ಖುಷಿಪಡುವುದೋ ಅಥವಾ ಕ್ಷೋಭೆಗೊಳ್ಳುವುದೋ, ಹೀಗೆ ಯಾವುದೇ ಅಡೆತಡೆ ಇಲ್ಲದೆ ಯೋಚಿಸುವುದಕ್ಕೆ ಒಂದು ಸುಸಮಯ.

ನನ್ನ ಮುಂದಿನ ಸೀಟಿನಲ್ಲಿ ಎರಡು ಜೊತೆ ದಂಪತಿಗಳು (ಬಹುಶಃ ಭಾವ ಮೈದುನರಿರಬಹುದು) ಪ್ರಯಾಣಿಸುತ್ತಿದ್ದರು. ಅವರು ಜೋರಾಗಿ ತೆಲುಗಿನಲ್ಲಿ ಮಾತನಾಡುತ್ತಿದ್ದರು. ಅವರ ಕಷ್ಟ-ಸುಖಗಳನ್ನೆಲ್ಲಾ ಕೇಳಾದ ಮೇಲೆ 8 ಘಂಟೆಗೆಲ್ಲಾ ನಾನು ಮಧ್ಯದ ಶಯನಾಗಾರ ಮಂಚವನ್ನು ಹತ್ತಿ ಮಲಗಲು ಅಣಿ ಮಾಡಿಕೊಂಡೆ. ಮನೆಯಲ್ಲಿ ಯಾವತ್ತೂ 8 ಘಂಟೆಗೆ ಮಲಗಿಲ್ಲ ಅಥವಾ ಎದ್ದಿಲ್ಲ. ಈಗ ಸಿಕ್ಕ ಈ ಸದಾವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಮಲಗಿದೆ. ಸುಮಾರು 12 ಘಂಟೆಯವರೆಗೂ ಹೊರಳಾಡಿ, ಅಲ್ಲ, ಕುಲುಕಾಡಿ ಯಾವಾಗ ನಿದ್ದೆ ಹತ್ತಿತೋ ಗೊತ್ತಾಗಲಿಲ್ಲ.

ಮಧ್ಯೆ ಒಂದು ಸಮಯದಲ್ಲಿ ಒಂದು ಸಂಭಾಷಣೆಯಿಂದ ಥಕ್ಕನೆ ಎಚ್ಚರವಾಯಿತು. ಬೆಳಗಿನ ಸುಮಾರು ಐದು ಘಂಟೆಯಿರಬಹುದು. ನನಗೆ ಕಣ್ಣೇ ಬಿಡಲು ಆಗುತ್ತಿಲ್ಲ. ರೈಲಿನ ಮೇಲಂತಸ್ತಿನಿಂದ ಜೋರಾಗಿ ಮಾತನಾಡುತ್ತಿರುವುದು ಕೇಳುತ್ತಿತ್ತು.

ಒಂದು ಗಂಡುದನಿ - ''ಯಾಕೆ ಬೆಳಿಗ್ಗೆ ತುಮ್ಮುತ್ತಿದ್ದೆ?''

ಇನ್ನೊಂದು ಗಂಡುದನಿ- ''ನಾನಾ! ಇಲ್ಲವಲ್ಲಾ!''

ಒಂ.ಗಂ.ದ - ''ಹೌದು ನೀನೇ, ಬೆಳಿಗ್ಗೆ ತುಮ್ಮುತ್ತಿದ್ದೆ''

ಇ.ಗಂ.ದ - ''ಇಲ್ಲವಲ್ಲಾ! ಬೆಳಿಗ್ಗೆ ನಾನ್ಯಾಕೆ ತುಮ್ಮುತ್ತೀನಿ!''

ಒಂ.ಗಂ.ದ - ''ನೀನೇ ಸುಮಾರು ಐದಾರು ಸಲ ತುಮ್ಮಿದೆ''

ಇ.ಗಂ.ದ - ''ನಾನು! ಐದಾರು ಸಲ ತುಮ್ಮಿದ್ದು! ಎಷ್ಟೊತ್ತಿನಲ್ಲಿ?'' ಸಾಧ್ಯಾನೇ ಇಲ್ಲ.

ಒಂ.ಗಂ.ದ - ''ಸುಮಾರು 4 ಘಂಟೆಯಲ್ಲಿ. ಧ್ವನಿ ಕೇಳಿ ನೀನೇ ತುಮ್ಮಿದ್ದು ಅನ್ನಿಸ್ತು''

ಇ.ಗಂ.ದ - ''4 ಘಂಟೆಯಲ್ಲಿ ನಾನೇಕೆ ತುಮ್ತೀನಿ, ಅದೂ ಐದಾರು ಸಲ''?

ಒಂ.ಗಂ.ದ - ''ರೈಲು ಗುಲ್ಬರ್ಗಾ ದಾಟಿತ್ತೋ ಏನೋ, ಆಗ ತುಮ್ಮಿದ ದನಿ ಕೇಳಿ ನೀನೇ ಅನ್ಕೊಂಡೆ.''

ಇ.ಗಂ.ದ - ''ರೈಲು ಗುಲ್ಬರ್ಗಾ ದಾಟಿದ್ದೇ ಗೊತ್ತಾಗಲಿಲ್ಲ. ಇನ್ನು ಎದ್ದು ಐದಾರು ಸಲ ಏಕೆ ತುಮ್ತೀನಿ?''

ಒಂ.ಗಂ.ದ - ''ತುಮ್ಮಿದ್ದು ಕೇಳಿ ನಿನಗೆ ನೆಗಡಿಯಾಯ್ತೇನೋ ಎಂದುಕೊಂಡೆ.''

ಇ.ಗಂ.ದ - ''ನನಗೆ ನೆಗಡೀನೇ ಇಲ್ಲ, ಇನ್ನು ತುಮ್ಮುವ ಪ್ರಶ್ನೆ ಎಲ್ಲಿಂದ ಬಂತು? ಅದೂ ಐದಾರು ಸಲ!''

ಕಣ್ಣೆಳೆದುಕೊಂಡು ಹೋಗುತ್ತಿದ್ದುದು ಬಿಟ್ಟ ಬಿರುಗಣ್ಣಾಯಿತು. ಇವರಿಬ್ಬರ ತುಮ್ಮಿನ ಪ್ರಸಂಗ ಕೇಳಿ ಕೇಳಿ ಮೈಯೆಲ್ಲಾ ತುರುಚಿಕೊಳ್ಳುವ ಹಾಗಾಯಿತು.

ಒಂ.ಗಂ.ದ - ''ಅದೇ ನಾನೂ ಅನ್ಕೊಂಡೆ ನಿನಗೆ ನೆಗಡೀನೇ ಇರಲಿಲ್ಲ. ಮತ್ತೆ ಯಾಕಪ್ಪಾ ತುಮ್ತಿದ್ದೀಯಾ ಅನ್ಕೊಂಡೆ.''

ಯಾಕೋ ಇದು ವಿಪರೀತವಾಗುತ್ತಿತ್ತು. ಮೂಗಿಗೆ ಸೀರೆಯ ಕೊನೆಯನ್ನು ತಿರುಚಿ ''ಆ ಆ ಆ ಕ್ಷೀ ಕ್ಷೀ ಕ್ಷೀ...'' ಎಂದು ಇಡೀ ರೈಲೇ ನಡುಗುವಂತೆ ಜೋರಾಗಿ ತುಮ್ಮಿದೆ.

ಆ ತುಮ್ಮರಿಬ್ಬರೂ ತುಪ್‌ಚುಪ್!!

ನಾನೂ ಬಂದಿದ್ದೆ ಹಾಸ್ಯೋತ್ಸವಕ್ಕೆ

– ಎಂ.ಎನ್.ಕೆ.

ನಾನು ಬರುವಾಗ ರಸ್ತೇಲಿ ನಮ್ಮ ಬೇಲೂರ್ ಪಕ್ಕದಮನೆಯವರಿಗೆ ಸಮಾಧಾನ ಮಾಡ್ತಿದ್ರು. ಅವರ ಮನೆ ಗೇಟ್ ಮುಂದೆ ಇದ್ದ ಸ್ಕೂಟರ್‌ಗಳನ್ನು ಶ್ರೀ ಬೇಲೂರ್ ಮತ್ತು ಇತರ ಸ್ವಯಂ ಸೇವಕರು ತೆಗೆದು ಪಕ್ಕಕ್ಕೆ ಇಡುತ್ತಿದ್ದರು. ಅಲ್ಲಾ ನಾವು ನಮ್ಮ ವಾಹನಗಳನ್ನ ಸರಿಯಾಗಿ ಪಾರ್ಕ್ ಮಾಡಿ ಒಳಗೆ ಹೋದರೆ ಜಾಗಾ ಸಿಗುತ್ತಾ? ಅದಕ್ಕೇ ಅಲ್ವಾ ನಾವೆಲ್ಲಾ ಅವಸರದಲ್ಲಿ ಸ್ಕೂಟರ್ ಪಾರ್ಕ್ ಮಾಡಿದ್ದು? ಹೋಗಲೀ ಬಿಡಿ ಆ ಮನೆಯವರೂ ಸಹ ಮುಂದಿನ ಸಲ ಬೇಗನೆ ತಮ್ಮ ವಾಹನವನ್ನು ತೆಗೆದು ಹೊರಗಿಡಲಿ. ಇಲ್ಲಾ ಮುಂದಿನಸಲದಿಂದ for all those neighbours affected by HASYOTSAVA fans ಒಳಗೆ ಸೀಟ್ಸ್ ರಿಸರ್ವ್ ಮಾಡಿಬಿಡೋಣ. ಅವರೂ ಹಾಯಾಗಿ ಒಳಗೆ ಕೂತು ಎಂಜಾಯ್ ಮಾಡಲಿ. ಅವರಿಗೂ ಅವತ್ತು ಮನೇಲಿ ಒಲೇ ಹಚ್ಚೋ ತಾಪತ್ರಯ ಬೇಡ.

ನಾನು ಬಂದಾಗ ಒಳಗೆ ಎಲ್ಲಾ ಸೀಟೂ ಭರ್ತಿ. ಒಳಗೆ ಸಾಸಿವೇ ಕಾಳಿಗೂ ಜಾಗವಿಲ್ಲಾ. ಹೊರಗೆ ಇದ್ದ ಒಂದು ಕುರ್ಚಿ ಹಿಡಿದು ಕೂತೆ. ವಯೋಧರ್ಮ. ಟಾಯ್ಲೆಟ್ಗೆ ಹೋಗಿ ಬರೋದ್ರಲ್ಲಿ ನನ್ನ ಕುರ್ಚಿ ಅಬೇಸ್. ನಿಂತೆ ನಿಂತೆ. ಅಲ್ಲಿದ್ದ ಬುಕ್ ಸ್ಟಾಲ್‌ಗಳ ಹತ್ತಿರ ಅಡ್ಡಾಡಿದೆ. ಇನ್ನಾರಾದರು ನನ್ನಂತೆ ಟಾಯ್ಲೆಟ್ಗೆ ಹೋಗ್ತಾರಾ ಅಂತ ಹೊಂಚು ಹಾಕಿದೆ. ಅವರು ಹೋದ ಕೂಡಲೆ ಅವರ ಸೀಟ್ನ ನಾನು ಅಬೇಸ್ ಮಾಡಬಹುದೇನೋಂತ. ಉಹುಂ ಇಲ್ಲಾ ಯಾರೂ ಹೋಗಲಿಲ್ಲ. ಹೋದವರೂ ತಮ್ಮ ಸೀಟ್ನ ನೋಡಿಕೊಳ್ಳಲು ಪಕ್ಕದವರಿಗೆ ಹೇಳಿ ತಮ್ಮ ಕೈಚೀಲ ಇಲ್ಲ ಕರ್ಚೀಫ್ (KSRTC Style) ಇಟ್ಟು ಹೋಗುತ್ತಿದ್ದರು. ನನ್ನಂತೇ Seatless ಮತ್ತು Unseated ಆಗಿ ನಿಂತಿದ್ದ ಅನೇಕರೊಡನೆ ಸೇರಿ ಒಳಗಿಂದ ಬರುತ್ತಿದ್ದ ಹಾಸ್ಯ ಚಟಾಕಿಗಳನ್ನು Enjoy ಮಾಡ್ತಾ ಹಾಗೂ ಆರಾಮವಾಗಿ ಕೂತಿದ್ದವರನ್ನು ನೋಡಿ ಕರುಬುತ್ತಾ ಕಾಲಾಕಳಿದೆ.


ನನ್ನ ಕೆಲವು Suggestions:

1. "Senior Citizens seats' ಅಂತಾ ಕೆಲವು ಸೀಟ್ಸ್ ಕಾದಿರಿಸೋದು.
2. ಕನಿಷ್ಠ ಪಕ್ಷ 25% chairs ಜಾಸ್ತಿ ತರಿಸೋದು. ಕಾರಣ: ಅಲ್ಲಿದ್ದ ಪ್ರತಿ ಸಂಸಾರವೂ ತನ್ನ ಚೀಲಗಳು, ಸ್ವೆಟರ್, ಶಾಲುಗಳು ಇತ್ಯಾದಿ ಇಡುಕ್ಕೆ ಒಂದು chair ಜಾಸ್ತೀ ಹಿಡಿಯುತ್ತೆ.

3. ಟಾಯ್ಲೆಟ್ಗೆ ಹೋಗೋರಿಗೆ ಅವರ chair ತಮ್ಮ ಜೊತೆ ಟಾಯ್ಲೆಟ್ಗೆ ಕೊಂಡೊಯ್ಯಲು ಅನುಮತಿ. ಜೊತೆಗೆ ಅಲ್ಲಿ ಅದನ್ನಿಡಲು ಜಾಗ. (ಏರ್ಪೋರ್ಟ್‌ನಲ್ಲಿರುತ್ತಲ್ಲಾ Hand Bag ಇಡಲು, ಹಾಗೇ)
4. ''ನಿಮ್ಮ ಆಸನಗಳನ್ನು ನೀವೇ ತರಬಹುದು'' ಎನ್ನೋ ಸೂಚನೆ. ನಮ್ಮ ಜೊತೆಗೆ ನಮ್ಮ ಕುರ್ಚಿ, ಚಾಪೆ ದಿಂಬು ನಾವೇ ತಂದರೆ ನಮ್ಮ ಮಧ್ಯಾನದ siestaಗೂ ಅನುಕೂಲ.

ನನ್ನ ಸ್ನೇಹಿತರು ಹೇಳುತ್ತಿದ್ದರು ''ಅಲ್ರೀ ನಾವು ಭಾರತೀಯರಿಗೆ ಡಿಸಿಪ್ಲಿನ್ ಇಲ್ಲಾಂತ ಯಾರ್ರೀ ಹೇಳಿದ್ದು? ಅಂಥೋರ್ನ ಕರ್ಕೊಂಬನ್ರೀ ನಮ್ಮ ಹಾಸ್ಯೋತ್ಸವಕ್ಕೆ. ನೋಡಿ ಕಲೀಲಿ ಡಿಸಿಪ್ಲಿನ್ ಅಂದ್ರೇನೂಂತ. ಊಟದ ಸಮಯದಲ್ಲಿ ಸಾಲಾಗಿ ನಿಂತು ತಮ್ಮ ಸರದಿ ಕಾಯೋ HASYOTSAVA fans ರನ್ನು ನೋಡಿ Let them change their opinion" ಅಂದೇ ಬಿಟ್ರು.

ಥ್ಯಾಂಕ್ಯೂ ಹಾಸ್ಯೋತ್ಸವ. ಥ್ಯಾಂಕ್ಯೂ ಹಾಸ್ಯೋತ್ಸವ ಫ್ಯಾನ್ಸ್!
ON TO HASYOTSAVA 1999.



'ಬೆಳಗ್ನಿಂದ ಏನು ಹುಡುಕ್ತಾ ಇದೀರಿ ತಾತ?'
''ನಮ್ಮ ಪ್ರಧಾನಿ ಭಾರತ ಪ್ರಗತಿಯ ಹಾದಿಯಲ್ಲಿ ಅಂತ ಹೇಳ್ದಾಗಿಂದ ಆ ಹಾದೀನ ಹುಡುಕ್ತಾ ಇದ್ದೀನಿ ಕಣೇ''

ಹರಿಕಥೆಯ ಕಥೆ

– ನಕ್ಷತ್ರಿಕ

ಜಗಲಿ ಮೇಲೆ ಕೂತಿದ್ದ ಆಚಾರಿ ತುಸು ಬಲಕ್ಕೆ ವಾಲಿ ಎಡಗಡೆ ಸೊಂಟ ಕೆರ್ಕೊಂಡು ಗಂಟ್ಲಿಂದ ಗಡದ್ದಾಗಿ ಸ್ವರ ಒಳಕ್ಕೆಳ್ಕೊಂಡು ಹ್ಯಾಕ್‌ಥೂ ಅಂತ ಕ್ಯಾಕರಿಸಿ ಬಂದಷ್ಟು ಕಫ ಉಗಿದು ಅಷ್ಟಕ್ಕೇ ಸುಸ್ತಾಗಿ ಅಯ್ಯಮ್ಮ ಅನ್ನೋ ಹೊತ್ತಿಗೆ ರಾಮಿ ಮನೆ ಚಿಲ್ಟಾರಿ ಓಡೋಡಿ ಬಂದು ''ಸುಂದರು ಅಂಕಲ್ ಮನೇಲಿ ಸಂಜೆ ಐದಕ್ಕೆ ಹರಿಕಥೆ ಇದೆ ಎಲ್ರೂ ತಪ್ದೇ ಬರಬೇಕಂತೆ'' ಅಂತ ಒದರ್ಕೊಂಡು ಓಡಿಹೋಯ್ತು.

ಸುಂದರುಗೇನ್ ಬಂತು ದೊಡ್ರೋಗ ಇದ್ದಕ್ಕಿದ್ದಂತೆ ಹರಿಕಥೆ ಏರ್ಪಾಡು ಮಾಡೋಕೆ. ಇವತ್ತೇನು ಅಮಾವಾಸ್ಯೆನೂ ಅಲ್ಲ. ಪೌರ್ಣಮಿನೂ ಅಲ್ಲ ಅಂತ ಗೊಣಗಿಕೊಂಡೇ ಎದ್ದ ಆಚಾರಿ ಮನೆಯೊಳಗೆ ನೋಡಿ ''ಇವಳೇ ಸುಂದರು ಮನೇಲಿ ಹರಿಕಥೆಯಂತೆ ಬರೋಹಾಗಿದ್ರೆ ಬಾ... ಹಾಗೇ ಬೆಳಗ್ಗೆ ತಗೊಂಡ ಅವರೇಕಾಯ್ನೂ... ಒಂದಿಷ್ಟು ಹತ್ತೀನೂ ತಗೋ ನಾ ಅವರೇಕಾಯಿ ಬಿಡಿಸ್ತೀನಿ, ನೀನು ಹೂ ಬತ್ತಿ ಮಾಡು. ಎರಡೊಂದು ಕೆಲಸವೂ ಆಗುತ್ತೆ'' ಅಂದರು.

ಆಚಾರಿಯ 'ಇವಳು' ಗೋದ ಎರಡೇ ನಿಮಿಷಕ್ಕೆ ರೆಡಿಯಾದರು. ಇಂಥಾ ಅದ್ಭುತಗಳು ಆಚಾರಿ ಮನೇಲಿ ಒಂದೊಂದ್ಸಾರಿ ನಡೆಯುತ್ತೆ.

ಆಚಾರಿ ಸುಂದರು ಮನೆಗೆ ಹೋಗೋ ಹೊತ್ತಿಗೆ ಅಲ್ಲಿಗಾಗಲೇ ಅನೇಕ ದಂಪತಿಗಳು ಜಮಾಯಿಸಿದ್ದರು.

ಸುಂದರು ಬನ್ನಿ ಬನ್ನಿ ಅಂತ ಆಚಾರಿ ದಂಪತಿಗಳನ್ನು ಬರಮಾಡಿಕೊಂಡ. ಸುಂದರು ಮಗನ ಸ್ಲೇಟಿನ ಮೇಲೆ ''ಶ್ರೀಕೃಷ್ಣ ಜನನ'' ಹರಿಕಥೆ... ಹರಿದಾಸರಿಂದ... ಸೇವಾರ್ಥ... ಸುಂದರು ಮತ್ತು ಆನಂದಿ ಅಂತ ಬರೆದಿತ್ತು.

ಹರಿಕಥೆ ಪ್ರಾರಂಭ ಆಗೋ ಮೊದಲು ಅವರೇಕಾಯಿ ಸುಲಿಯೋದು, ಹೂವು ಬಿಡಿಸೋದು ಪ್ರಾರಂಭವಾಗಿತ್ತು.

ಅಲ್ಲಿ ಬಂದಿದ್ದೋರ್ದೆಲ್ಲ ಒಂದೇ ಪ್ರಶ್ನೆ ಸುಂದುರುಗೆ ಹರಿಕಥೆ ಮಾಡ್ಸೋ ಪ್ರಮೇಯ ಏನ್ ಬಂದಿತ್ತು... ಜೊತೆಗೆ ಸೇವಾರ್ಥಕ್ಕೆ ಆನಂದಿ ಯಾಕೆ ಸೇರ್ಕೊಂಡ ಅಂತ. ಆದ್ರೆ ಯಾರೂ ಆ ಪ್ರಶ್ನೇನ ನೇರವಾಗಿ ಕೇಳ್ಲಿಲ್ಲ.

ಆರೂವರೆ ಅಂದ್ರೆ ಆರೂಮುಕ್ಕಾಲಿಗೆ ಸರಿಯಾಗಿ ಹರಿಕಥೆ ಪ್ರಾರಂಭವಾಯ್ತು. ಹರಿದಾಸರು ಅಂದ್ರೆ ಹರಿಕಥೆ ಪಂಟ್ರು. ಜೊತೆಗೆ ಉಪ ಕಥೆಗಳನ್ನು ಹೇಳಿ ನಗಿಸಿ ಸಾಕುಮಾಡ್ತಾರೆ. ಜೊತೆಗೆ ಅನೇಕ ಸಾರಿ ಕೇಳಿದ್ದ ಹರಿಕಥೆ

ಬೇರೆ. ಹೀಗಾಗಿ ಅಂಥಾ ಚಾರ್ಮ್ ಇರಲಿಲ್ಲ. ಚಾರ್ಮ್ ಇದ್ದಿದ್ದೆಲ್ಲ ಕುತೂಹಲದಲ್ಲಿ ಹರಿಕಥೆ ಮುಗಿದು ಚರ್ಪು ತಿಂದಾದ ಮೇಲಾದರೂ ಸುಂದರುನ ಕೇಳಬೇಕು ಅಂದ್ಕೊಂಡಿದ್ರು, ಚರ್ಪು ಏನು ಅನ್ನೋದು ಡಿಸೈಡ್ ಆಗಿತ್ತೋ ಇಲ್ವೋ. ಆದರೆ ವಾಸನೆಯಂತೂ ಬರ್ತಿರ್ಲಿಲ್ಲ. ಒಂದಂತೂ ಗ್ಯಾರಂಟಿ ಚರ್ಪು ಕೊಡದೇ ಕಳಿಸೋಲ್ಲ ಅಂತ.

ಶ್ರೀಕೃಷ್ಣ ಜನನವಾಯ್ತು. ಸುರಿಯೋ ಮಳೇಲಿ ಕೃಷ್ಣನ್ನ ಬುಟ್ಟೀಲಿ ಹೊತ್ಕೊಂಡು ಸಾಗಿಸಿದ್ದು, ಕೃಷ್ಣ ನೆನೀದೇ ಇರ್ಲಿ ಅಂತ ಏಳೆಡೆ ಸರ್ಪ ಅವನಿಗೆ ನೆರಳಾದದ್ದು ಎಲ್ಲನೂ ಹರಿದಾಸರು ಕಣ್ಣಿಗೆ ಕಟ್ಟಿದ ಹಾಗೆ ವಿವರಿಸಿದರು. ಕೊನೆಗೆ ಶ್ರೀಮದ್ರಮಾರಮಣ ಗೋವಿಂದ... ಅಂದದ್ದಕ್ಕೆ ಎಲ್ರೂ ಗೋವಿಂದ ಅಂದರು.

ಎಷ್ಟೋ ಮನೆಯ ಕೆಲಸ ಸರಾಗವಾಗಿ ಮುಗಿದಿತ್ತು ಗೋದ ಹೂಬತ್ತಿ ಜೋಪಾನ ಮಾಡ್ಕೊಂಡು ಅವರೇಕಾಳು ತೆಗೆದಿರಿಸಿಕೊಂಡು, ಸಿಪ್ಪೇನ ಸುಂದರು ಮನೆ ಹಸೂಗೆ ಹಾಕಿದರು.

ಸುಂದರು ''ದಯವಿಟ್ಟು ಎಲ್ರೂ ಕೂತ್ಕೊಬೇಕು'' ಅಂತ ಹೇಳ್ತಿದ್ದ ಬೆನ್ನಿಗೇ ಅವನ ಹೆಂಡತಿ ಪದ್ಮಾಕ್ಷಿ ದೊಡ್ಡ ತಟ್ಟೇಲಿ ಹಲವಾರು ದೊನ್ನೆಗಳನ್ನಿಟ್ಕೊಂಡು ಬಂದು ಎಲ್ರಿಗೂ ಕೊಟ್ಟಳು.

ಘಮ ಘಮ ಅನ್ನೋ ಕಡ್ಲೇಕಾಳು ಉಸಲಿ. ನೋಡಿದ್ರೇ ಬಾಯಿ ನೀರೂರುವಂತಿತ್ತು. ಸರಿ ಎಲ್ಲ ಕೈಗೂ ಬಾಯ್ಗೂ ಜಗಳ ಷುರು ಮಾಡೇಬಿಟ್ರು.

ಬೇಕಾದೋರು ಕೇಳಿ ಹಾಕಿಸ್ಕೊಬಹುದು. ಸಂಕೋಚ ಬೇಡ ಅಂತ ಆನಂದಿ ಹೇಳಿದ ಮೇಲೆ ಹೆಚ್ಚೂ ಕಡಿಮೆ ಎಲ್ಲರೂ ಎರಡನೇ ಸಾರಿ ಬಡಿಸಿಕೊಂಡು ಮೆದ್ದರು.

ಇಷ್ಟೆಲ್ಲ ಆದರೂ ಕುತೂಹಲ ತಣಿದಿರಲಿಲ್ಲ. ಸುಂದರೂಗೂ, ಆನಂದಿಗೂ ಏನಾಯ್ತು. ಯಾಕೆ ಹರಿಕಥೆ ಅರೇಂಜ್ ಮಾಡಿದ್ರು. ಯಾಕೆ ಸೇವಾರ್ಥ ಇಟ್ಕೊಂಡ್ರು... ಲಾಟ್ರಿ ಗೀಟ್ರಿ ಹೊಡೀತೇ... ಯಾವ್ದಾದ್ರೂ ನಿಧಿ ಸಿಕ್ತೆ... ಏನಾಗಿದೆ ಅಂತ.

ಮನೇಲಿ ಮಾಡಿದ್ದ ಉಸಲಿ ಹೆಚ್ಚೂ ಕಮ್ಮಿ ಖಾಲಿಯಾದ ಮೇಲೆ ಸುಂದರು ಮುಖದಲ್ಲೂ, ಆನಂದಿ ಮುಖದಲ್ಲೂ ನೆಮ್ಮದಿ. ಉಸಲಿ ತಿಂದಾದ ಮೇಲೆ ಒಂದ್ಲೋಟ ನೀರನ್ನು ಗಳಗಳ ಅಂತ ಒಳಕ್ಕಿಳಿಸಿ ಅಬ್ಬಬ್ಬ ಅಂತ ಉಸಿರುಬಿಟ್ಟ ಆಚಾರಿ ಕೇಳಿಯೇಬಿಟ್ರು.

''ಸುಂದರು ಹರಿಕಥೆಯೂ ಚನ್ನಾಗಿತ್ತು. ಉಸಲಿ ಅದಕ್ಕಿಂತ ಚನ್ನಾಗಿತ್ತು. ಆದ್ರೆ ಈ ದಿಢೀರ್ ಹರಿಕಥೆ ಕಾರಣ... ಇಬ್ಬರ ಸೇವಾರ್ಥಕ್ಕೆ ಕಾರಣನೂ ತಿಳಿಸಿಬಿಟ್ರೆ...''

ಸುಂದರು ಎದ್ ನಿಂತು... ''ಅಂಥಾ ರಾಜಕಾರಣ ಏನಿಲ್ಲ. ಸಂತೋಷದ ಸಮಾಚಾರವೂ ಏನಿಲ್ಲ... ನಮ್ಮಿಬ್ಬರ ಮನೇಲೂ ನಡೆದ ಒಂದು ಅಚಾತುರ್ಯ ಇಂದಿನ ಹರಿಕಥೆ ಮತ್ತು ಚರ್ಚೆಗೆ ಕಾರಣ'' ಅಂದ್ರು

ಕೋರಸ್ ಧ್ವನಿ ''ಅಚಾತುರ್ಯವೇ... ಏನು...''

''ಹೇಳ್ತೀನಿ ಹೇಳ್ತೀನಿ... ಸುಂದರು ಪ್ರಾರಂಭಿಸಿದರು

''ಇವತ್ ಬೆಳಿಗ್ಗೆ ಏನಾಯ್ತೂಂದ್ರೆ ನಮ್ಮನೆಯವಳು ದಿನಸಿ ಡಬ್ಬಗಳನ್ನು ಕ್ಲೀನ್ ಮಾಡ್ತಾ ಇದ್ಲು. ಕಡ್ಲೆಕಾಳು ಡಬ್ಬ ತೆಗೀತಾ ಇದ್ದಾಗ ಅದು ಅನಾಮತ್ತಾಗಿ ನೀರಿನ ಕೊಳದಪ್ಲೆಗೆ ಬಿತ್ತು ಅಷ್ರಲ್ಲಿ ಮೊಸರಿನವರು ಕೂಕ್ಕೊಂಡಾಗ ಅಲ್ಲಿಗೆ ಓಡಿಹೋದ್ಲು. ಆಮೇಲೆ ಮರ್ತೇಹೋಯ್ತು, ಮಧ್ಯಾಹ್ನ ನಾನು ನೀರಿನ ಕೊಳದಪ್ಲೆ ಕಡೆ ನೋಡಿದ್ರೆ ಅಷ್ಟೂ ಕಡ್ಲೆಕಾಳು ನೆಂದು ದಪ್ಪ ದಪ್ಪ ಆಗಿವೆ. ಇದೇನೇ ಅಂದ್ರೆ ಅಯ್ಯೋ ನನ್ನ ಮರೆವಿಗೆ ಅಂತ ತಲೆ ಚಚ್ಕೊಂಡ್ಲು... ಸುಮಾರು ಒಂದೂವರೆ ಸೇರಿನಷ್ಟು ಕಡ್ಲೆಕಾಳು... ಇದನ್ನಿಟ್ಕೊಂಡು ಏನಪ್ಪ ಮಾಡೋದು ಅಂತ ಯೋಚಿಸ್ತಿದ್ದೆ.''

ಆನಂದಿ ಮುಂದುವರೆಸಿದರು

''ಅದೇ ಟೈಮಿಗೆ ನಮ್ಮನ್ಲೇನಾಯ್ತು ಅಂದ್ರೆ ನಮ್ಮವಳ ತಮ್ಮ ಹದಿಮೂರರ ಹಲ್ಕಾನನಮಗ ಜಗನ್ನಾಥ ಊರಿಗೆ ಬಂದಿದ್ದ, ತರ್ಲೆ ಅಂದ್ರೆ ಮಹಾ ತರ್ಲೆ, ನಾನಂತೂ ಬೈತಾ ಇರ್ತೀನಿ... ಇವಳಿಗೆ ಕಾಣಿಸದೇ ಹೊಡೆದೂ ಬಿಡ್ತೀನಿ. ಹರಿಮೂರಾದ್ರೂ ಹದ್ನೈದ್ ಪೈಸದಷ್ಟೂ ಬುದ್ದಿ ಬಂದಿಲ್ಲ... ನೆನ್ನೆ ಒಂದ್ ತರ್ಲೆ ಕಲಸ ಮಾಡ್ದ ಚೆನ್ನಾಗಿ ಬೈದೆ... ಉಪ್ಪಿಟ್ ಮಾಡ್ತೀನಿ ಕಾಯಿ ತುರ್ಕೊಡಿ ಅಂತ ಇವಳು ನಂಗೆ ಹೇಳಿದ್ಲು. ನಾನೇನ್ ಮಾಡ್ದೆ... ಈ ನನ ಮಗನಿಗೆ ಮಾಡ್ತೀನಿ ಅಂತ ಬಾರೋ ಇಲ್ಲಿ ಅಂತ ಕರ್ದು ''ಇಲ್ಲಿ ಕುಕ್ಕರಬಡ್ಕೊಂಡು ಕಾಯಿ ತುರಿ... ನಾನು ಹೇಳೋತನಕ ಮೇಲೇಳಬಾರ್ದು ಅಂತ ಸುಗ್ರೀವಾಜ್ಞೆ ಹೊರಡಿಸ್ದೆ. ಪಾಪ ಅದೂ ಸಿನ್ಸಿಯರ್ ಆಗಿ ಕಾಯಿ ತುರೀತು ನಾನು ಹೇಳೋ ವರೆಗೂ.

ನಾನು ವರಾಂಡಕ್ಕೆ ಬಂದು ಪೇಪರ್ ಓದ್ತಾ ಕೂತ್ಕೊಂಡೆ. ಇವಳು ಬಟ್ಟೆ ಒಗೀತೀನಿ ಅಂತ ಮಹಡಿಗೆ ಹೋದಳು. ನಾನು ಕೊಟ್ಟ ಪನಿಷ್‌ಮೆಂಟ್‌ನ ಸೀರಿಯಸ್ಸಾಗಿ ತಗೊಂಡ ಜಗನ್ನಾಥ ಒಂದು ಕಾಯಿ ಹೋಳು ತುರಿದು

ಮುಗಿಸಿದ. ಇದ್ದದ್ದೇ ಒಂದ್ ಹೋಳು ಮಿಕ್ಕಿದ್ದು ಇಡೀ ಕಾಯಿಗಳು. ಸರಿ ಇನ್ನೊಂದ್ ಕಾಯಿ ಒಡೆದ. ಎರಡು ಹೋಳನ್ನೂ ತುರಿದ. ಆಗ್ಲೂ ನನ್ದು ಪೇಪರ್ ಓದೀದ್ ಮುಗಿದಿರಲಿಲ್ಲ ಇವಳ್ದು ಬಟ್ಟೆ ಒಗೆದು ಮುಗಿದಿರಲಿಲ್ಲ. ಅವನಾಗೇ ಬಂದು ಕೇಳೋಕೆ ಭಯವೋ ಏನೋ. ಸರಿ ಇನ್ನೊಂದು ಕಾಯಿ ಒಡೆದ. ಇನ್ನೊಂದು ಹೋಳನ್ನ ತುರಿದ. ಒಂದು ಮೊರದ ತುಂಬಾ ಕಾಯಿತುರಿ. ಹಾಗೆ ನೋಡಿದ್ರೆ ನಂಗೆ ಜಗನ್ನಾಥಂಗೆ ಫನಿಷ್‌ಮೆಂಟ್ ಕೊಟ್ಟಿದ್ದೇ ಮರ್ತ್‌ಹೋಗಿತ್ತು. ಇವಳು ಬಟ್ಟೆ ಒಗೆದಾದ ಮೇಲೆ ಒಳಗೆ ಬಂದ್ರೆ ಅದೇನೋ ಕರಟ ಕೆರೆಯೋ ಸದ್ದು. ಇದೇನಪ್ಪ ಅಂತ ನೋಡಿದ್ರೆ ಈಳಿಗೆ ಮಣೆ ಮುಂದೆ ಒಂದ್ ರಾಶಿ ಕಾಯಿತುರಿ, ಜಗನ್ನಾಥ ಕರಟ ಕೆರೀತಿದಾನೆ. ಅಯ್ಯೋ... ಅಯ್ಯೋ... ಅಂತ ಬಾಯಿ ಬಡ್ಕೊಂಡು ಇದೇನೋ ನಿನ್ನ ಮನೆ ಕಾಯವಾಗ ಅಂತ ಬೈದ್ರೆ ''ಭಾವ ಪನಿಷ್‌ಮೆಂಟ್ ಕೊಟ್ಟಿದ್ದು... ಅವರು ಸಾಕು ಅನ್ನೋ ತನಕ ನಾನು ಕಾಯಿ ತುರೀತಾನೇ ಇರ್ತೀನಿ'' ಅಂತ ಇನ್ನೊಂದು ಇಡೀ ಕಾಯಿಗೆ ಕೈ ಹಾಕ್ದಾಗ ಇವಳು ಅವನ ಕುತ್ತಿಗೆ ಮೇಲೆ ಎರಡು ಮಿದ್ದು ಆಚೆಗೆ ಹಾಕಿದಳು.

''ಇಲ್ನೋಡ್ರೀ ಇಷ್ಟೊಂದ್ ಕಾಯಿ ತುರಿ ಇದನ್ನೇನ್ರೀ ಮಾಡೋದು ಕೊಬ್ರಿಮಿಠಾಯಿ ಮಾಡ್ಕೊಂಡು ತಿನ್ನೋದೇನ್ರೀ'' ಅಂತ ಇವಳು ನನ್ನ ಕರೆದು ಕಾಯಿತುರಿ ತೋರಿಸಿದಳು. ನನಗೂ ಒಂಥರಾ ಷಾಕ್ ಆಯ್ತು ಎದ್ದು ಆಚೆಗೆ ಬಂದೆ. ಈ ಅನಾಹುತನ ಸುಂದರುಗೆ ಹೇಳೋಣಾಂತ ನಾನು ಅವನ ಮನೆಗೆ ಹೋಗೋಷ್ಟರಲ್ಲಿ ಅವನೇ ನಮ್ಮನೆಗೆ ಬಂದ. ಅನಾಹುತಗಳ ವಿವರಣೆಗಳು ವಿತರಣೆಯಾದವು... ಸರಿ ಇದನ್ನ ಸರಿಪಡಿಸೋದು ಹೇಗೆ? ಪದಾರ್ಥವೂ ವೇಸ್ಟ್ ಆಗಬಾರದು ಉಪಯೋಗವೂ ಆಗಬೇಕು ಅಂತ ಯೋಚ್ನೆ ಮಾಡೀ ಮಾಡಿ ಈ ಹರಿಕಥೆ, ಚರ್ಪು ನಿರ್ಧಾರ ಮಾಡಿದೆವು. ನಾವು ಕರೆದಿದ್ದಕ್ಕೆ ನೀವೂ ಬಂದ್ರಿ ಉಸಲಿ ಖಾಲಿ ಮಾಡಿದ್ರಿ, ಸಂತೋಷ.''

ಉಪ ಸಂಹಾರವಾಗಿ ಸುಂದರು ''ನಿಮ್ಮನ್ಲೂ ಇಂಥಾ ಅನಾಹುತಗಳು ನಡೆದ್ರೆ ಹೀಗೇ ಹರಿಕಥೆ ಏರ್ಪಾಡು ಮಾಡಿ'' ಅಂದರು.

ಬೃಹತ್ ಪೃಷ್ಠಗಳು ನೆಲಕ್ಕೆ ಕೈ ಊರಿ ರಾಮ ರಾಮಾ ಅಂದ್ಕೊಂಡು ಎದ್ದು ಮನೆಕಡೆ ಹೊರಟವು.

ಸುಂದರೂನೂ ಆನಂದಿಯೂ ಅವರವರ ಪರಿವಾರವೂ ಉಳಿದಿದ್ದ ಉಸಲಿ ಖಾಲಿ ಮಾಡಲು ಚಾಪೆ ಮೇಲೆ ಕೂತರು.

★★★

ಹೀಗೊಬ್ಬ ಗಾಂಧಿ

- ಕೃಷ್ಣ ಸುಬ್ಬರಾವ್

ಗೋಪಿನಾಥರಾಯರು ಒಬ್ಬ ಹಳೇಕಾಲದ ಶಿಸ್ತಿನ ಸಿಪಾಯಿ. ಉನ್ನತ ಹುದ್ದೆಯಲ್ಲಿದ್ದವರು. ಬೀದಿಗಳಲ್ಲಿ ಕಾರುಗಳು ಕಾಣಿಸಿಕೊಳ್ಳುವುದೇ ಅಪರೂಪವಾಗಿದ್ದ ಕಾಲದಲ್ಲಿ ಯಾವಾಗಲೂ ಕಾರಿನಲ್ಲೇ ತಿರುಗುತ್ತಿದ್ದ ಜಬರ್‌ದಸ್ತಿನ ಆಸಾಮಿ. ಆಫೀಸಿನಲ್ಲಿ ಅತ್ಯಂತ ಮೇಧಾವಿ. ಎಲ್ಲದರಲ್ಲೂ ಶಿಸ್ತು. ಒಂದು ಗಳಿಗೆಯೂ ಯಾರೂ ತಡವಾಗಿ ಬರುವಹಾಗಿಲ್ಲ, ಹೇಳದ ಕೇಳದೆ ರಜ ಹಾಕುವ ಹಾಗೆ ಇಲ್ಲ. ಇನ್ನು ಕೆಲಸದಲ್ಲಿ ಸ್ವಲ್ಪವೂ ವ್ಯತ್ಯಾಸವಾಗುವ ಹಾಗೇ ಇಲ್ಲ ಅವರನ್ನು ಗುಟ್ಟಾಗಿ ಎಲ್ಲಾ ಮುಂಗೋಪಿನಾಥರಾಯರು ಎಂದು ಕರೆಯುತ್ತಿದ್ದರು.

ಪ್ರತಿನಿತ್ಯ ಮನೆಮುಂದೆ ಹತ್ತು ಘಂಟೆಗೆ ಸರಿಯಾಗಿ ಕಾರ್ ಡ್ರೈವರ್ ಸೀತಪ್ಪ ಬಂದು ನಿಲ್ಲಬೇಕು. ಯಜಮಾನರು ಹೊರಗೆ ಬರುತ್ತಿದ್ದಂತೆ ಕಾರಿನ ಬಾಗಿಲನ್ನು ತೆಗೆದು ನಿಲ್ಲಬೇಕು ಗೋಪಿನಾಥರಾಯರು ಒಳಗೆ ಕುಳಿತುಕೊಳ್ಳುತ್ತಿದ್ದಂತೆ ಸರಿಯಾಗಿ ಬಾಗಿಲು ಹಾಕಿ ತಾನು ಮುಂದೆ ಹೋಗಿ ಕುಳಿತು ಕಾರನ್ನು ಚಲಿಸಬೇಕು. ಕಾರಿಗೆ ಇಂಧನ ಇಲ್ಲವೆಂದಾಗಲಿ ಅಥವಾ ಇನ್ನಾವುದೇ ಸರಿಯಾಗಿಲ್ಲವೆಂದು ಹೇಳುವ ಹಾಗೇ ಇಲ್ಲ. ಎಲ್ಲಾ ಅಚ್ಚುಕಟ್ಟಾಗಿ ನೋಡಿಕೊಳ್ಳಬೇಕು. ಕಾರಿನಲ್ಲಿ ಧೂಳಾಗಲಿ ಅಥವಾ ಬೇಡದ ವಸ್ತು ಬಿದ್ದುವಾಗಲಿ ಕಂಡರೆ ಅವರ ಕೋಪದ ಕಣ್ಣಿನಲ್ಲಿ ಇಡೀ ಕಾರನ್ನು ಸೀತಪ್ಪನೊಡನೆ ಸುಟ್ಟುಬಿಡುತ್ತಿದ್ದರು. ಆಫೀಸಿಗೆ ಬಂದಿಳಿಯುತ್ತಿದ್ದಂತೆ ಮತ್ತೆ ಪರಾಕು! ಬೇಗ ಇಳಿದು ಬಾಗಿಲನ್ನು ತೆಗೆದು ಸ್ವಾಮಿಯವರು ಹೊರಗೆ ಬರುತ್ತಿದ್ದಂತೆ ಅವರ ಫೈಲು, ಅವರ ಊಟದ ಕ್ಯಾರಿಯರ್ ಎಲ್ಲಾ ತೆಗೆದುಕೊಂಡು ಹಿಂಬಾಲಿಸಬೇಕು. ಒಂದು ಕ್ಷಣ ತಡವಾದರೆ ಎಲ್ಲರೆದುರಿನಲ್ಲೇ ಕಪಾಳಕ್ಕೆ ಬಿಗಿಯುತ್ತಿದ್ದರು ವಾರಕ್ಕೆ ಸಾಧಾರಣ ಐದಾರೂ ಕಪಾಳಮೋಕ್ಷ ಗ್ಯಾರಂಟಿ. ಆದರೆ ಕಪಾಳಕ್ಕೆ ಹೊಡೆದ ತಕ್ಷಣ ಒಂದು ರೂಪಾಯಿ ದಂಡವನ್ನು ತಾವೇ ವಿಧಿಸಿಕೊಂಡು ಸೀತಪ್ಪನಿಗೆ ಕೊಡುತ್ತಿದ್ದರು.

ಬಹಳ ವರ್ಷಗಳಿಂದ ಆಫೀಸಿನವರು ಕಾಯುತ್ತಿದ್ದ ದಿನ ಬಂತು. ದೇವರು ಕಣ್ಣು ಬಿಡುವುದರಲ್ಲಿ ದೇರ್ (ತಡ)ವಿರಬಹುದದು ಅಂದೇರ್ ನಹಿ, ಅಂತ

ಉದ್ಗಾರ ಮಾಡಿದರು. ಗೋಪಿನಾಥರಾಯರು ನಿವೃತ್ತಿಯಾಗುವ ದಿನ ಬಂತು. ಆಫೀಸಿನಿಂದ ಅವರನ್ನು ಬಹಳ ಉತ್ಸಾಹದಿಂದ ಸಹೋದ್ಯೋಗಿಗಳು ಬೀಳ್ಕೊಟ್ಟರು. ಅವರ ಶಿಸ್ತಿನ ಅಡಿಯಲ್ಲಿ ಸಿಕ್ಕಿ ನರಳಿದ ಜನರೂ ಅವರ ಶಿಸ್ತನ್ನು ಕೊಂಡಾಡಿ ಕಳುಹಿಸಿಕೊಟ್ಟರು. ಹಾರಾ ತುರಾಯಿಗಳನ್ನು ಕೊಟ್ಟರು. ಅವರನ್ನು ಮನೆಗೆ ಬಿಟ್ಟುಬರಲು ಸೀತಪ್ಪ ಕಾರು ತಂದು ನಿಲ್ಲಿಸಿದಾಗ ಗೋಪಿನಾಥರಾಯರು ''ಇಲ್ಲ ಇನ್ನು ಕಾರುಬಾರು ನನಗಿಲ್ಲ, ನಾನು ನಡದೇ ಹೋಗುತ್ತೇನೆ ಆಫೀಸಿನ ಕಾರು ನಾನು ಉಪಯೋಗಿಸೊಲ್ಲ'' ಎಂದರು.

ಬಹಳ ಜನಗಳ ಒತ್ತಾಯದ ಮೇರೆಗೆ ಹಾಗೂ ಅವರ ಜಾಗದಲ್ಲಿ ಬಂದ ಹೊಸ ಅಧಿಕಾರಿಗಳ ಅಪ್ಪಣೆ ಮೇರೆಗೆ ಸೀತಪ್ಪನೊಡನೆ ಕಾರಿನಲ್ಲಿ ಕುಳಿತುಕೊಳ್ಳಲು ಒಪ್ಪಿದರು. ಸೀತಪ್ಪ ಅವರನ್ನು ಮನೆಗೆ ತಲುಪಿಸಿದ. ಕಾರಿನ ಬಾಗಿಲನ್ನು ತೆಗೆಯಲು ಸ್ವಲ್ಪ ತಡಮಾಡಿದ. ಗೋಪಿನಾಥರಾಯರು ಕೆಳಗೆ ಇಳಿದು ಸೀತಪ್ಪನಿಗೆ ಕೆನ್ನೆ ಮೇಲೆ ಪಟಪಟ ಅಂಥ ಹತ್ತು ಏಟುಗಳನ್ನು ಕೊಟ್ಟರು. ನಿವೃತ್ತಿಯಾದಮೇಲೂ ತನಗೆ ಈ ರೀತಿ ಒಟ್ಟಿಗೆ ಏಟುಗಳನ್ನು ಕೊಡುತ್ತಿದ್ದುದನ್ನು ನೋಡಿ ದಿಗ್ಭ್ರಮೆ ಆಯಿತು. ನಂತರ ಹತ್ತು ರೂಪಾಯಿಗಳನ್ನು ಅವನ ಮುಖದ ಮುಂದೆ ಇಟ್ಟು ಒಳಗೆ ನಡೆದರು ರಾಯರು. ಏಟಿಗೊಂದು ರೂಪಾಯಿ! ಸೀತಪ್ಪ ಕಣ್ಣಿನಲ್ಲಿ ನೀರು ಹಾಕುತ್ತಾ ರಾಯರು ಹೋಗುತ್ತಿದ್ದುದನ್ನು ನೋಡುತ್ತಲೇ ಇದ್ದ.

ಗಾಂಧಿ ಏಸು ಬುದ್ಧ ಎಲ್ಲರಂತಾಗಿದ್ದ ಸೀತಪ್ಪ. ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ತೋರಿಸಿದರೆ ಎಷ್ಟು ಲಾಭ ಗೋಪಿನಾಥರಾಯರಂತಹವರ ಮುಂದೆ ಎಂದೆನಿಸಿತು.

★★★

ನಿಜ ಜೀವನದಲ್ಲಿ ಇಂತಹ ಅನೇಕ ಸ್ವಾರಸ್ಯ ಘಟನೆಗಳು ಎಲ್ಲೋ ನಡೆದಿರುತ್ತೆ, ನೀವು ಕೇಳಿದ್ದನ್ನು ಅನೇಕರಿಗೆ ತಿಳಿಸಿ ಅಪರಂಜಿ ಮೂಲಕ. ಹೊಸಬರಿಗೆ ಬರೆಯಲು ಆತ್ಮವಿಶ್ವಾಸ ಕಡಿಮೆಯಾಗಿದ್ದರೂ ಪರವಾಗಿಲ್ಲ, ಆಡುವ ಭಾಷೆಯಲ್ಲೇ ಬರೆಯಿರಿ ಅದನ್ನು ಪರಿಷ್ಕರಿಸಿ ಪ್ರಕಟಿಸುತ್ತೇವೆ. ಎರಡು ಪುಟ ಮೀರದಂತಿರಲಿ.

- ಸಂಪಾದಕರು

ಎಚ್ಚರಿಕೆ, ಗೋವಿಂದಾ... ಗೋವಿಂದ...

– ಕಂ.ಭಂ. ಕೃಷ್ಣಮೂರ್ತಿ

ಭಕ್ತಾದಿಗಳು ಮುಗಿಬಿದ್ದು ಬರುವಂತಹ ದೇವಸ್ಥಾನ ಅದಾಗಿರಲಿಲ್ಲ. ಮುಜರಾಯಿ ಇಲಾಖೆಯ ಕಾಕದೃಷ್ಟಿಗೆ ಬೀಳದೆ ಎಲೆ ಮರೆಯ ಕಾಯಿಯಂತೆ ಮರಕುಂಟೆಯ ಹೊರಾವರಣದಲ್ಲಿ ಪುಟ್ಟ ಆಂಜನೇಯಸ್ವಾಮಿಯ ಚಿಕ್ಕ ಗುಡಿ. ಇನುಪ್ಲುಯೆನ್ಸ್‌ಯಿಲ್ಲದ, ಆದಾಯದ ಆಸೆಯಿಲ್ಲದ ದಡ್ಡ ಭಟ್ಟರೊಬ್ಬರು ಸ್ವಾಮಿಯ ಪೂಜಾದಿ ಕೈಂಕರ್ಯಗಳನ್ನು ಮಾಡಲು ಗುಡಿಗೆ ಗಂಟುಬಿದ್ದಿದ್ದರು. ಪವಾಡಗಳನ್ನು ಮಾಡಿ ಪ್ರಸಿದ್ಧಿ ಪಡೆಯದ ಮುಖ್ಯಪ್ರಾಣನಿಗೆ, ಭಟ್ಟರೆ ತಮ್ಮ ಮನೆಯಿಂದ ಪ್ರಸಾದವನ್ನು ಮಾಡಿ ತರುತ್ತಿದ್ದರು. ಒಂದು ದಿನ ಪೊಂಗಲು, ಮತ್ತೊಂದು ದಿನ ಪುಳಿಯೋಗರೆ ಸ್ವಾಮಿಯ ನೈವೇದ್ಯಕ್ಕೆ ಇದ್ದೇಯಿರುತ್ತಿತ್ತು. ಇನ್ನು ಭಟ್ಟರ ಮಡದಿಗೆ ಮೂಡುಬಂದರೆ ಎರಡು, ಮೂರು ತರಹೆ ಪ್ರಸಾದಗಳು ಸಿದ್ಧವಾಗುತ್ತಿತ್ತು. ಮರಕುಂಟೆಯ ಭಕ್ತಾದಿಗಳು ಘಂಟಾನಾದ, ಮಂತಪುಷ್ಪವೆಲ್ಲಾ ಮುಗಿದ ಮೇಲೆ ಚರಪು ಹಂಚುವ ವೇಳೆಗೆ ತಪ್ಪದೆ ಹಾಜರಾಗುತ್ತಿದ್ದರು. ಒಂದು ಪಾವು ಪೊಂಗಲನ್ನು ಸಮಪಾಲಾಗಿ, ನೂರು ಜನಕ್ಕೆ ಹಂಚುವ ಚಾಕಚಕ್ಯತೆಯಿದ್ದ ಭಟ್ಟರು, ಸ್ವಾಮಿಗೆ ನೈವೇದ್ಯ ಮಾಡಿದ ಪ್ರಸಾದವನ್ನು ಎಲ್ಲರಿಗೂ ಹಂಚಿಯಾದ ಮೇಲೆ, ಗುಡಿಯ ಮುಂಬಾಗಿಲಿನಲ್ಲಿ ನಿಂತು ''ಎಚ್ಚರಿಕೇ'' ಎಂದು ಏರುದನಿಯಲ್ಲಿ ಕೂಗುಹಾಕುತ್ತಿದ್ದರು. ಅದು ಕಿವಿಗೆ ಬಿದ್ದ ತಕ್ಷಣವೇ ಭಕ್ತಾದಿಗಳು ''ಗೋವಿಂದಾ ಗೋವಿಂದ'' ಎಂದು ಭಟ್ಟರ ಕೂಗಿಗೆ ಮರುಕೂಗು ಹಾಕಿ ಜಾಗ ಖಾಲಿ ಮಾಡುತ್ತಿದ್ದರು. ಇದು ಪ್ರತಿನಿತ್ಯದ ರಿವಾಜಾಗಿತ್ತು.

ಭಟ್ಟರು ಪ್ರಸಾದ ವಿತರಿಸಿ ಕೊನೆಯಲ್ಲಿ ಎಚ್ಚರಿಕೆಯೆಂದು ಏಕೆ ಹೇಳಬೇಕೆನ್ನುವುದೇ ನನಗೆ ಅರ್ಥವಾಗಿರಲಿಲ್ಲ. ''ರೇಷನ್ ಅಕ್ಕಿಯಿಂದ ತಯಾರಾದ ಪ್ರಸಾದವಾದುದರಿಂದ, ಕಲ್ಲು ಮಣ್ಣುಗಳು ಬೆರೆತಿವೆ, ಎಚ್ಚರಿಕೆಯಿಂದ ತಿನ್ನಿ'' ಎಂದು ಮಸಲ ಭಕ್ತಾದಿಗಳನ್ನು ಎಚ್ಚರಿಸಲು ಭಟ್ಟರು ಹೀಗೆ ವಿನಿಯೋಗದ ನಂತರ ಕೂಗು ಹಾಕುತ್ತಿರಬಹುದೆ ಎಂಬ ಗುಮಾನಿಯೂ ನನಗಾಯಿತು. ಸಂಶಯಾತ್ಮ ವಿನಶ್ಯತಿ ಅಂದುಕೊಂಡು, ದೊಡ್ಡ ದೇವಸ್ಥಾನದಲ್ಲಿ ಸರ್ವೀಸು ಮಾಡಿ, ರಿಟಾಯರಾಗಿ ಕೂತಿದ್ದ ಅವಧಾನಿಗಳನ್ನು ಭೇಟಿಯಾಗಿ ನನ್ನ

ಅನುಮಾನವನ್ನು ವಿವರಿಸಿದೆ. ''ಎಚ್ಚರಿಕೆ ಯಾಕೆ, ಗೋವಿಂದ ಯಾಕೆ ಅಂಬೋದು ತಿಳೀಲಿಲ್ಲ ಸ್ವಾಮಿ. ಅಪ್ಪಣೆಯಾಗಬೇಕು'' ಅಂತ ಬೆಣ್ಣೆಸವರಿ ಹೇಳಿದೆ. ಅವಧಾನಿಗಳು ಆಗತಾನೆ ಆರೋಗಣೆ ಮುಗಿಸಿ ಪಡಸಾಲೆಯಲ್ಲಿ ಕೂತು, ಓಲೆಗರಿಯ ಬೀಸಣಿಗೆಯಿಂದ ಬೆವರುತ್ತಿದ್ದ ಅಗಾಧ ದೇಹಕ್ಕೆ ಗಾಳಿ ಹಾಕಿಕೊಳ್ಳುತ್ತಿದ್ದರು. ತರ್ಕ, ಕಾವ್ಯ ವ್ಯಾಕರಣ ಮೀಮಾಂಸೆಗಳನ್ನು ಯಥಾಶಕ್ತಿ ಜೀರ್ಣಿಸಿಕೊಂಡಿದ್ದ ಅವರು, ಸಿಕ್ಕಿದವರೊಂದಿಗೆ ವಾಗ್ವಾದಕ್ಕಿಳಿಯುತ್ತಿದ್ದುದರಿಂದ ಯಾರೂ ಅವರ ತಂಟೆಗೇ ಹೋಗುತ್ತಿರಲಿಲ್ಲ. ನಾನು ಅವೇಳೆಯಲ್ಲಿ ಭೇಟಿಗೆ ಬಂದುದನ್ನು ಕಂಡು ಅವರು ಹುಬ್ಬೇರಿಸಿದರು. ''ಏನಪಾ, ಏನಾತು? ಯಾಕ ಬಂದಿ?'' ಎಂದು ಕೊಂಚ ಗಡಿಬಿಡಿಯಿಂದಲೇ ಕೇಳಿದರು, ನನ್ನ ಕೋರಿಕೆಯನ್ನು ಕೇಳಿ ಅವರಿಗೆ ನಿರಾಶೆಯೇ ಆಯಿತು. ''ಪ್ರಖಾಂಡ ಪಂಡಿತನೆಂದು ತಿಳಿದುಕೊಂಡಿದ್ದ ತನಗೆ ಈ ದಡ್ಡ ಪ್ರಶ್ನೆಯನ್ನು ಕೇಳುವುದೇ?'' ಎಂದು ಕಿರಿಕಿರಿ ಪಟ್ಟುಕೊಂಡರು. ಒಂದು ರೀತಿಯ ಧೋರಣೆಯಿಂದಲೇ ಹೇಳಿದರು. ''ಮಗೂ, ಇದರಾಗೇನೂ ಅಂತಹ ಮಹತ್ವ ಅದೇ ಅಂಬೂದೇ ನಮಗೆ ತಿಳೀವಲ್ದು. ತತ್ರಾಪಿ ನೀ ಕೇಳಿದ ಮ್ಯಾಲೆ ನಾವು ಅಪ್ಪಣೆ ಕೊಡಿಸುವುದು ನಮ್ಮ ಧರ್ಮ. ಪ್ರಸಾದ ವಿತರಣೆಯಾದ ಮೇಲೆ ಭಟ್ಟರು ಎಚ್ಚರಿಕೆ ಅಂಬೋದು ಯಾಕಂತಂದ್ರೆ, ಹಂಚಿಕೆ ಮುಗೀತು. ಮತ್ತೆ ಇನ್ನಾವ ಚರಪೂ ಇಲ್ಲಾಂತನ್ನೊದನ್ನ ಭಕ್ತವೃಂದಕ್ಕೆ ಸೂಚಿಸೋಕೆ, ಹಾಗೇನೇಯೆ ಭಕ್ತರೂ ನಮಗೆ ಅರ್ಥವಾತು. ನಾವು ಜಾಗ ಖಾಲಿ ಮಾಡ್ತಿದ್ದೇವೇಂತ ತಿಳಿಸಲಿಕ್ಕೆ ಗೋವಿಂದಾಂತ ಮರುಕೂಗು ಹಾಕೂದು. ಇದು ನಮ್ಮ ಅಂಬೋಣ'' ಎಂದು ಹೇಳಿ ನನ್ನನ್ನೇ ನೋಡಿದರು, ನನ್ನ ಮುಖದ ಮೇಲೆ ಇನ್ನೂ ಇದ್ದ ಪೆದ್ದ ಕಳೆಯನ್ನು ಕಂಡೋ ಏನೋ ನನಗಿನ್ನೂ ಅರ್ಥವಾಗಿಲ್ಲವೆಂದುಕೊಂಡು ''ನೋಡಪಾ ನಿಂಗೆ ಒಂದು ಉದಾಹರಣೆ ಕೊಟ್ರೆ ತಿಳಿತದೇಂತ ಕಾಣ್ತದೆ'' ಎಂದರು. ''ಕೇಸರಿ ಸಾಹೇಬ್ರನ್ ಭಟ್ಟರೂಂತ ಇಟ್ಟುಕೊ. ಮಾಜಿ ಪ್ರಧಾನಿ ಗೌಡ್ರನ್ನ ಭಕ್ತಮಂದೀಂತ ತಿಳುಕೊ. ಕೇಸರಿಯವರು ಎಚ್ಚರಿಕೇ ಅಂತಂದ್ರು, ಪ್ರಸಾದ ಮುಗೀತೂ ಅಂತಂದ್ರೆ, ನಮ್ಮ ಬೆಂಬಲ ಮುಗೀತು. ನೀವು ಜಾಗ ಖಾಲಿ ಮಾಡೀಂತ ಹೇಳಿದ ಹಾಂಗಾತು. ಅದಕ್ಕೆ ಮಾಜಿ ಪ್ರಧಾನಿ ಗೌಡ್ರು ಸೀಟು ಖಾಲಿ ಮಾಡಿ ಗೋವಿಂದಾ ಗೋವಿಂದಾಂತ ಮನೆಗೆ ಹೋದ್ರು. ಹೀಂಗದ ನಮ್ಮ ವ್ಯಾಖ್ಯಾನ. ಈಗ ತಿಳಿದಂಗೆ ಆತೇನು?'' ಎಂದು ಹೇಳಿ ಅವಧಾನಿಗಳು ಕುಳಿತಲ್ಲಿಯೇ ಪವಡಿಸಿದರು.

ಚಿಕಿತ್ಸೆ

– ರಾಮಿ

''ಒಂಥರಾ ಮೈ ಚೆನ್ನಾಗಿಲ್ಲ ಕಣಯ್ಯ'' ಅಂತ ಡಾ|| ದಂಡಪಾಣಿ ಬಳಿ ಹೋಗಿ ಚಿಕಿತ್ಸೆಗಾಗಿ ಗೋಗರೆದೆ.

ಮದ್ದು ಮಾತ್ರೆ ಏನೂ ಬೇಡ. ಊಟಿ, ಕೆಮ್ಮಣ್ಣುಗುಂಡಿ, ಕೊಡೈ ಎಲ್ಲಿಗಾದರೂ ಹೋಗಿ ನಾಲ್ಕು ದಿನ ಹಾಯಾಗಿದ್ದು ಬಾ ಗುಣವಾಗತ್ತೆ ಅಂತ ಚಿಕಿತ್ಸೆ ಹೇಳಿದ ದಂಡಯ್ಯ. ''ಹೊರಡು ಇವತ್ತೇ ಹೊರಡು'' ಅಂತ ದಂಡ ಬೀಸಿದ ಹಾಗೆ ಗದರಿಸಿದ.

ಇನ್ನೇನು ಹೊರಟೇಬಿಡೋಣ ಅಂತ ಸೂಟ್‌ಕೇಸ್ ಕೆಳಗಿಳಿಸಿದೆ. ಅಷ್ಟರಲ್ಲಿ ಫ್ಲಾರಿಡಾದಿಂದ ಫೋನು 'ಹೊರಟು ಬರ್ತೀವಿ' ಅಂತ.

ಈಗಷ್ಟೇ ಮೂರನೇ ವಿಂಟರ್ ಕಾಣ್ತಿರೋ ತುಂಟಿ ಶಹನಾ ಊರಿಗೆ ಬರುತ್ತೇ ಅಂದಮೇಲೆ ಬೇರೆ ಚಿಕಿತ್ಸೆ ಯಾಕೆ ಬೇಕು ಅಂತ ಸೂಟ್‌ಕೇಸ್ ಅಟ್ಟಕ್ಕೆಸೆದು ಅಣಿಯಾದೆ.

ಬಂತೇ ಬಂತಲ್ಲ ತುಂಟಿಯ ಸವಾರಿ. ಏರ್‌ಪೋರ್ಟ್‌ನಲ್ಲಿ ಜಾಣಮರಿ ಅಂತ ಮೇಲಕ್ಕೆತ್ತಿದರೆ ತಾತಾ ಮರಿ (ತಾತಾಮರಿ) ಅಂತ ಕೊಂಡಾಟ ಮಾಡಿ ಕಿವಿ ಹಿಂಡಿತು. ಆಮೇಲೆ ಊರಲ್ಲಿದ್ದ ಮೂರು ವಾರ ಹೇಗೆ ಕಳೆಯಿತೊ ಗೊತ್ತಿಲ್ಲ.

ಹತ್ತಿರದ ನಾಲ್ಕೂರು ಸುತ್ತಿ ಬರೋದಕ್ಕೆ ಹೊರಟೆವು. ಕುದುರೆ ಮುಖದ ಪಾರ್ಕಿನಲ್ಲಿ ತುಂಟ ಮರಿಯನ್ನು ನಾವು ನಲಿಸಿದೆವು ಅಥವಾ ಆಕೆ ನಮ್ಮನ್ನು ನಲಿಸಿದಳೋ ಹೇಳುವಂತಿಲ್ಲ.

ಕುದುರೆ ಮುಖದಿಂದ ಕಾರ್ಕಳಕ್ಕೆ ಬರೋ ದಾರಿಯಲ್ಲಿ ಮರಿಗೆ ಯಾಕೋ ಅದರಪ್ಪನ ಮೇಲೆ ಕೋಪ, ಅಳು ಬೇರೆ Big guy ನ ತೋರಿಸ್ತೀನಿ ಅಂದ ಮೇಲೆ ಸಮಾಧಾನ. ಆಮೇಲೆ ಬಿಗ್ ಗೈ ಬಗ್ಗೆ ಸಾವಿರ ಪ್ರಶ್ನೆ ಸಂಭ್ರಮವೇ ಸಂಭ್ರಮ. ಬಿಗ್ ಗೈನ ನೋಡುವ ಕಾತರವೇ ಕಾತರ.


ಸರಿ. ಕಾರ್ಕಳ ಬಂತು. ಬೆಟ್ಟ ಏರಿದೆವು ಮೂರ್ತಿಯ ಮುಂದೆ ನಿಂತು ನೋಡಿಲ್ಲಿ ಬಿಗ್ ಗೈ ಅಂತ ಹೇಳಿದರೆ ಆಪಾದ ಮಸ್ತಕ ದಿಟ್ಟಿಸಿ ನೋಡಿ ಕ್ರೇಜಿ ಗೈ ಅಂತ ತೀರ್ಪು ನೀಡಬೇಕೆ!

ಬಾಯಿ ಒತ್ತಿ ಹಿಡಿದು ಬೇರೆ ಕಡೆಗೆ ಒಯ್ದು ಬೆಟ್ಟ, ಗುಡ್ಡ ಮುಳುಗುತ್ತಿರುವ ಸೂರ್ಯ ತೋರಿಸಬೇಕಾಯಿತು.

ಹೊರಡುವಾಗ ಮತ್ತೆ ಮೂರ್ತಿಯ ಮುಂದೆ ನಿಂತು ಗ್ರೇಟ್ ಗೈ ಫಾಂಡ್ ಆಫ್ ಚಿಲ್ಡ್ರನ್ ಇತ್ಯಾದಿ ಸ್ತುತಿಸಿದ ಮೇಲೆ ಸೀಯೂ, ಟಾಟಾ ಬೈಬೈ ಹೇಳಿ ಬೀಳ್ಕೊಡುಗೆ.

ಮೂರು ವಾರಗಳಲ್ಲಿ ಇಂಥ ಪ್ರಸಂಗಗಳಿಗೆ ಲೆಕ್ಕವಿಲ್ಲ. ಕೊನೆಗೂ ಪುಲ್ಲು ಪ್ಲೇನು ಹತ್ತಿ ಕೈಬೀಸಿತು.

ಮೊನ್ನೆ ಡಾ|| ದಂಡಪಾಣಿ ಬಳಿಗೆ ಹೋಗಿದ್ದೆ. ತುಂಬ ಸುಧಾರಿಸಿದ್ದೀಯ ಅಂತ ಹೇಳಿದ. ಇನ್ನೇನೂ ದಾಡಿ ಬಡಿಯಲಾರದು ಅಂತ ಆಶ್ವಾಸನೆ ಬೇರೆ ನೀಡಿದ.



"ಕ್ಲಿಂಟನ್ ಹಗರಣ ಆದಮೇಲೆ ಹೊತ್ತಿಗೆ ಸರಿಯಾಗಿ ಮನೇಗೆ ಬರ್ತಿದಾರೆ ಇವ್ರು"

ರೆಡಿಮೇಡ್ ಭಾಷಣ

– ಸುಧಾ ಸರನೋಬತ್

‘‘ರೀ, ಒಂದು ಭಾಷಣ ಬರೆದು ಕೊಡಿ....’’ ಮಡದಿ ವಿನಯದಿಂದ ಕೇಳಿಕೊಂಡರು.

‘‘ಭಾಷಣ ಯಾಕೆ ಬೇಕು?’’

‘‘ನಾನು ಕಾರ್ಪೊರೇಶನ್ ಚುನಾವಣೆಯ ಅಭ್ಯರ್ಥಿ ಎನ್ನುವುದು ಮರೆತುಹೋಯ್ತೇ...?

‘‘ಹೌದಲ್ವೇ... ಆದ್ರೆ ಭಾಷಣ ಯಾಕೆ ಬೇಕು...? ಕಾರ್ಪೊರೇಶನ್ ಚುನಾವಣೆ ಎಂದ ಮೇಲೆ ಅದರ ಕೆಲಸ ರೋಡು ಗುಡಿಸುವುದು... ಚರಂಡಿ ತೊಳೆಸುವುದು... ಬೋರ್‌ವೆಲ್ ತೋಡಿಸುವುದು, ನಾಯಿಗಳನ್ನು ಅದೇ ಬೀದಿ ನಾಯಿಗಳನ್ನು ಹಿಡಿದು ಹಾಕುವುದು. ಒಟ್ಟಿನಲ್ಲಿ ಬಡಾವಣೆಗಳನ್ನು ಚೊಕ್ಕಟವಾಗಿ ಗುಡಿಸಿ ಇಡುವುದು ಇಷ್ಟೇ ತಾನೆ’’...

‘‘ಅಷ್ಟೇ ಅಲ್ಲಾರೀ ಇನ್ನೂ ಬೇಕಾದಷ್ಟಿದೆ ಕಾರ್ಪೊರೇಶನ್ ಕೆಲಸ...’’

‘‘ಗೊತ್ತುಕಣೆ... ಕಂಡ ಕಂಡಲ್ಲಿ ಕಸ ಗುಡ್ಡೆ ಹಾಕಿ ಎತ್ತದೇ ಇರೋದು ರಸ್ತೇ ಮಧ್ಯದಲ್ಲಿ ಗುಂಡಿ ತೋಡಿಸುವುದು, ಅದನ್ನು ವರ್ಷಾನ್‌ಗಟ್ಲೆ ಮುಚ್ಚದೆ ಅಂದ್ರೆ ರಿಪೇರಿ ಮಾಡದೆ ಹಾಗೇ ಬಿಟ್ಬಿಡೋದು... ರಾತ್ರಿ ಹೊತ್ನಲ್ಲಿ ಒಂದಿಬ್ಬರು ಧಾಂಡಿಗರು ಅದರಲ್ಲಿ ಬಿದ್ದರೆ ಅದಾಗದೇ ಮುಚ್ಚಿ ಹೋಗುವುದು ಅಲ್ವೇ....?

‘‘ತಮಾಷೇ ಮಾಡಬೇಡಿ... ರೋಡಿಗೆ ಟಾರು ಹಾಕಿಸುವ ಕೆಲಸವೂ ನಮ್ಮದೇ.... ಮನೆ ಕಟ್ಟಲು ಪ್ಲಾನ್... ಗಿಡ ಮರ ಹಚ್ಚುವುದು.... ನಗರ ನಿರ್ಮಲೀಕರಣ, ಆರೋಗ್ಯ ರಕ್ಷಣೆ, ಹೋಟ್ಲುಗಳಲ್ಲಿ ಸ್ವಚ್ಛತೆ ಕಾಪಾಡುವುದು... ಇದೆಲ್ಲ ನಮ್ಮ ಕೆಲಸವೇ.... ಇನ್ನೂ ಬೇಕಾದಷ್ಟಿದೆ, ಅದೆಲ್ಲ ವರದಿ ಒಪ್ಪಿಸಲು ಈಗ ನನಗೆ ಸಮಯವಿಲ್ಲ, ನನ್ನ ಬಡಾವಣೆಯ ಜನರ ಹತ್ತಿರ ಹೋಗಿ ಅವರಿಗೆ ನಾನು ಗೆದ್ದು ಬಂದರೆ ತಮ್ಮ ಕಷ್ಟ ಪರಿಹರಿಸುತ್ತೇನೆ ಎಂಮ ಭರವಸೆ ನೀಡಬೇಕು ಜೊತೆಗೆ ಒಂದು ಒಳ್ಳೇ ಭಾಷಣವೂ ಬೇಕು.... ಬೇಗ ಬರೆದು ಕೊಡೀಪ್ಪಾ’’... ನೀವು ಸಾಹಿತಿಗಳು ಇಂಪ್ರೆಸ್ಸಿವ್ ಆಗಿ ಬರೀತೀರಾ ಅಂತ... ಕೇಳ್ತಾ ಇದೀನಿ’’... ಮಡದಿಯ ಮಾತು ಮುಗಿಯುವ ಮೊದಲೇ ಹೊರಗಡೆ ಭಾರೀ ಗದ್ದಲ ಬೇರೆಯವರ ಪ್ರಜಾ ಕಾರ್ಯ ನಡೆದಿತ್ತು. ನಮ್ಮವರ ಎದುರಾಳಿ, ಎದುರು ಮನೆಯ ವಿಶಾಲಾಕ್ಷಮ್ಮ ಅದ್ದೂರಿಯಾಗಿ ಪ್ರಚಾರ ನಡೆಸಿದ್ದರು, ಮೈಕ್ ಹಿಡಿದು ಹೈಕಳು, ರಿಕ್ಷಾದಿಂದ ಜೋರಾಗಿ ಭಾಷಣ ಕಮ್ ಭರವಸೆ ನೀಡುತ್ತಿದ್ದರು. ‘‘ಅಕ್ಕಾ ಥಂಗೀರೆ... ಹಣ್ಣ ಥಮ್ಮಂದಿರೆ... ನಮ್ಮ ಪಕ್ಷದ ಅಭ್ಯರ್ಥಿಗೇ ತಮ್ಮ ಅಮೂಲ್ಯ ಮಥ... (ಮತ) ಅದು ದೇಶಕ್ಕೇ ಇತ (ಹಿತ) ದಂದಾಯ ಪಕ್ಷದ ಅಭ್ಯರ್ಥಿ, ಮಮತಾಮಯಿ ತಾಇ ಕಾರುಣ್ಯ

ಸಿಂದು, ಶ್ರೀಮತಿ ವಿಶಾಲಾಕ್ಷಮ್ಮನವರು ನಿಮ್ಮ ಮನೇ ಬಾಗಿಲಿಗೆ ತಮ್ಮ ಸ್ವಂತ ಕಾಲುಗಳ ಕಾಲ್ನಡಿಗೆಯಿಂದ ನಡೆದುಕೊಂಡೇ ಬರುತ್ತಿದ್ದಾರೆ, ನಿಮ್ಮ ಮನೆಗೆ ಸವಿನಯ ಭೇಟಿಗಾಗಿ ಬರುತ್ತಿದ್ದಾರೆ... ತಮ್ಮ ಕಸ್ಟ - ಸುಕ ಇಚಾರಿಸಲು ಬರುತ್ತಿದ್ದಾರೆ ತಮ್ಮ ಮನೆ ಮುಂದೆ ರೋಡು ಗುಡಿಸಿ, ಕಸ ಎತ್ತಿಸಿ, ತಮ್ಮ ಬಡಾವಣೆಯನ್ನು ಕ್ಲೀನಾಗಿಡಲು ಬರುತ್ತಿದ್ದಾರೆ, ತಮ್ಮ ಮನೆ ಪಕ್ಕದಲ್ಲಿನ ಚರಂಡಿಯ ಗಬ್ಬು ವಾಸನೆಯನ್ನು ಬಡಿದೆಬ್ಬಿಸಲು ಸಾರಿ, ಹೊಡೆದೋಡಿಸಲು ಬರುತ್ತಿದ್ದಾರೆ. ನಿಮ್ಮ ಬಡಾವಣೆಯಲ್ಲಿ ಗಿಡಗಳನ್ನು ಅಚ್ಚ ಅಸಿರಾಗಿಡಲು ಬರುತ್ತಿದ್ದಾರೆ, ನಿಮಗೆ ಬಂದ ಎಲ್ಲ ಕಸ್ಟ-ನಸ್ಟಗಳನ್ನು ಪರಿಅರಿಸಲು ಬರುತ್ತಿದ್ದಾರೆ... ದೆಹಲಿಯಲ್ಲಿ ಡೇಂಗೆ ಜ್ವರ ಬಂದು ಸಾವಿರಾರು ಜನರು ಅಸ್ವಸ್ತರಾಗಿ, ಆಸ್ಪತ್ರೆ ಸೇರಿದ್ದು ತಮಗೆಲ್ಲ ತಿಳಿದ ವಿಷಯವೇ... ಆದರೆ ನಾವು ಅಂದರೆ, ನಮ್ಮ ಪಕ್ಷದ ಅಭ್ಯರ್ತಿ ಗೆದ್ದು ಬಂದರೆ, ಮಾಡುವ ಮೊದಲನೇ ಕೆಲಸ ಏನಪಾ... ಅಂದರೆ, ತಮ್ಮ ಬಡಾವಣೆಯಲ್ಲಿ ಸೊಳ್ಳೆಗಳ ಕಾಟವನ್ನು ನಿವಾರಿಸಿ, ಕ್ಲೀನ್ ಮಾಡಿಸಿ, ತಮ್ಮಗೆ, ಡೇಂಗೆ ಜ್ವರ ಬರದಂತೆ ಕಾಪಾಡುವುದು... ಅಕಸ್ಮಾತ್ ಈ ಚುನಾವಣೆಗೆ ಮೊದಲೇ ತಾವು ಸೊಳ್ಳೆ ಕಚ್ಚಿಸಿಕೊಂಡು, ಡೇಂಗೆ ಜ್ವರಕ್ಕೆ ಬಲಿಯಾಗಿದ್ದರೆ ನಮ್ಮ ಅಭ್ಯರ್ಥಿ ಏನೂ ಮಾಡಲಾಗುವುದಿಲ್ಲ. ಇಂತ ಗನ ಕಾರ್ಯ ಮಾಡಲು ಎಣಗುತ್ತಿರುವ ನಮ್ಮ ಪಕ್ಷದ ಅಭ್ಯರ್ತಿಗೇ ತಮ್ಮ ಹಮೂಲ್ಯವಾದ ಓಟು ಕೊಡಲು ಮರೆಯಬೇಡಿ''... ರೆಡಿಮೇಡ್ ಭಾಷಣ ದಕ್ಕಿತು, ಅಲ್ಲ... ಸಿಕ್ಕಿತು ಬರೆದು ಮಡದಿಯ ಕೈಗೆ ಕೊಟ್ಟೆ...

ಭರ್ಜರಿಯಾಗಿ ಚುನಾವಣೆ ನಡೆದು, ನಮ್ಮವರು (ಅರ್ಧಾಂಗಿ) ಅದ್ದೂರಿಯಾಗಿ ಗೆದ್ದು ಬಂದರು. ಬಹಳ ಖುಷಿಯಾಗಿತ್ತು. ಎಲ್ಲರ ಕಷ್ಟ ಸುಖ ವಿಚಾರಿಸಲು ತಮ್ಮ ಬಡಾವಣೆಯ ಮನೆ ಮನೆಗೂ ಹೋಗಿ ಕೈ ಮುಗಿದು ನಮಗೇ ಓಟು ಕೊಡಿ ಎಂದು ಹೇಳಿ ಹೇಳಿ ಸುಸ್ತಾಗಿದ್ದರು. ಕೊಂಚ ಸುಧಾರಿಸಿಕೊಳ್ಳುತ್ತಿದ್ದರು.

''ಆಮ್ಮಾವರೆ... ಅಮ್ಮಾವರೆ...'' ವೃದ್ಧನೊಬ್ಬ ಬಂದು ಮನೆಯ ಹೊರಗೆ ನಿಂತಿದ್ದನು.

'ಯಾರು ಬೇಕು'...? ಕೇಳಿದೆ.

''ನಮ್ಮ ಬೀದೀಲಿ... ಎಲ್ಲಿ ನೋಡಿದ್ರೂ ಅಲ್ಲಿ ಇಲಿಗಳು, ಹೆಗ್ಗಣಗಳು ಸತ್ತುಬಿದ್ದಿವೆ ಸ್ವಾಮಿ... ಮನೇಲೂ ಅಷ್ಟೇ... ಇಲಿ ಸತ್ತು ಬಿದ್ರೆ ಒಳ್ಳೇದಲ್ಲ.. ಪ್ಲೇಗುಮಾರಿ ಬರುತ್ತೆ ಅಂತ ಕೇಳಿವ್ನಿ, ಅದೂ ಅಲ್ಲದೆ ಬೀದೀಲಿ ಜನ ಮೂಗು ಮುಚ್ಚಿಕೊಂಡು ಓಡಾಡ್ತಾ ಅವ್ರೆ... ರೋಡು ಗುಡಿಸೋರು ನಮ್ಮ ಬೀದಿಗೆ ಬಂದು ಹದಿನೈದು ದಿನಾ ಆಯ್ತು..'' ವೃದ್ಧನ ಮಾತು ಮುಂದುವರೆದಿತ್ತು. ಅರ್ಧಾಂಗಿ, ಅವಡುಗಚ್ಚಿ, ಕೋಪದಿಂದ ಆರ್ಭಟಿಸಿದರು...

''ನಿಮ್ಮ ಬೀದೀಲಿ, ಇಲಿ ಬಿದ್ರೆ ನೀವೆಲ್ಲಾ ಸೇರಿ ಎತ್ತಿ... ಈಗ ತಾನೆ ಇಲೆಕ್ಷನ್ ಗಲಾಟೆ ಮುಗಿದು ಸ್ವಲ್ಪ ರೆಸ್ಟ್ ತೊಗೊಳೊಣಾಂದ್ರೆ ಆದಕ್ಕೂ ಕಲ್ಲು ಹಾಕ್ತಾರೆ ಈ ಜನ.... ಯಾರಲ್ಲಿ ಹೊರಗೆ... ಇನ್ಮೇಲೆ ಕಾರ್ಪೊರೇಷನ್ ಬಗ್ಗೆ ದೂರು ತಂದ್ರೆ ಅವರ್ನ ಒಳಗೆ ಬಿಡಬೇಡಿ''... ಕಟ್ಟಾಜ್ಞೆ ಮಾಡಿದರು ನಮ್ಮವರು!!

ಅಪರಂಜಿ

ಕಳೆದ ಹದಿನೈದು ವರುಷಗಳಿಂದ ಉತ್ತಮ ಅಭಿರುಚಿಯ, ಪ್ರಬುದ್ಧ ವಿನೋದ ಸಾಹಿತ್ಯವನ್ನು ನಾಡಿನ ಹಾಸ್ಯಪ್ರೇಮಿಗಳಿಗೆ ನೀಡುತ್ತಾ ಬಂದಿರುವ ಮಾಸಿಕ ಅಪರಂಜಿ. ಇಪ್ಪತ್ತೈದು ವರ್ಷಗಳ ಕಾಲ ಕನ್ನಡ ಜನತೆಯನ್ನು ರಂಜಿಸಿದ ಕೊರವಂಜಿ ನಡೆದ ಹಾದಿಯಲ್ಲಿ ನಡೆಯುತ್ತಾ ಬಂದಿರುವ ಈ ಪತ್ರಿಕೆಗೆ ಒಂದು ಸುಭದ್ರವಾದ ಆರ್ಥಿಕ ಬುನಾದಿಯನ್ನು ಒದಗಿಸುವ ಉದ್ದೇಶದಿಂದ ಅಪರಂಜಿಗೆ ಆಜೀವ ಸದಸ್ಯತ್ವವನ್ನು ನೀಡುವಂತೆ ಕನ್ನಡ ಹಾಸ್ಯಾಭಿಮಾನಿಗಳನ್ನು ಕೋರುತ್ತಿದ್ದೇವೆ. ಚಂದಾ ವಿವರಗಳು ಇಂತಿವೆ:

ಆಜೀವ ಚಂದಾ: 500/- ರೂ.ಗಳು

ವಾರ್ಷಿಕ ಚಂದಾ: 60/- ರೂ.ಗಳು

ಆಜೀವ ಚಂದಾಹಣವನ್ನು 250/- ರೂ. ಗಳ ಎರಡು ಕಂತುಗಳಲ್ಲಿ ಕೊಡುವ ಸೌಲಭ್ಯವಿದೆ. ಚೆಕ್ಕುಗಳನ್ನು ''ಅಪರಂಜಿ'' ಹೆಸರಿಗೆ ನಮೂದಿಸಬಹುದು. ಚಂದಾದಾರರಿಗೆ, ಪ್ರತಿ ತಿಂಗಳ ಸಂಚಿಕೆಯೇ ಅಲ್ಲದೇ ಪ್ರತಿವರ್ಷ ಡಿಸೆಂಬರಿನಲ್ಲಿ ನಡೆಯುವ ಹಾಸ್ಯೋತ್ಸವಕ್ಕೆ ಆದರದ ಆಹ್ವಾನ ಹಾಗೂ ಆ ಸಂದರ್ಭದಲ್ಲಿ ಹೊರಬರುವ ವಿಶೇಷ ಸಂಚಿಕೆ ಉಚಿತವಾಗಿ ದೊರೆಯುತ್ತದೆ. ನಿಮ್ಮ ಸದಸ್ಯತ್ವವನ್ನು ಇದಿರು ನೋಡುವ,

ತಮ್ಮ ವಿಶ್ವಾಸಿ,
ಶಿವಕುಮಾರ್, ಸಂಪಾದಕ

ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ಮಾನ್ಯರೇ,

ಈ ಮೂಲಕ ''ಅಪರಂಜಿ''ಗೆ ನನ್ನ ಚಂದಾ ಹಣ (ಆಜೀವ ಚಂದಾ/ ವಾರ್ಷಿಕ ಚಂದಾ) ವನ್ನು ನೀಡುತ್ತಿದ್ದೇನೆ.

ನನ್ನ ವಿಳಾಸ ಹೀಗಿದೆ:

....

....

....

....

ಇಂತೀ ತಮ್ಮ ವಿಶ್ವಾಸಿ,

(ಸಹಿ)



ಶ್ರೀಮತಿ ಶಾಂತಾ ಮತ್ತು ಶ್ರೀ ಸಿ. ಆರ್. ರಘು

ಇವರ ಸವಿನೆನಪಿಗೆ

ಪೂರ್ಣಿಮಾ ರಘು ಗೌಡ – ಸುಧೀರ್‌ಗೌಡ

ಶ್ರೀಹರಿ ಕಡಾಂಬಿ.

Regd No BGW 180

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram Bangalore - 560 003. Printed at RAVI GRAPHICS, 62, 4th Cross, SSI Area, Rajajinagar, Bangalore 560 010.